ಜನಮನದ ದನಿ
# ಪ್ರಜೋದಯ
ಸಂಪಾದಕ : ಜೆ.ಆರ್. ಕೆಂಚೇಗೌಡ



ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಂಗಳವಾರ ಬೆಳಿಗ್ಗೆ ಪತ್ನಿ ಸಮೇತರಾಗಿ ತಿರುಪತಿ ತಿಮ್ಮಪ್ಪನ ದರ್ಶನ ಪಡೆದರು.

20 ಮೇ, 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 70 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಕೋವಿಡ್‌ನಿಂದ ಬದಲಾಗದ ನಾವು ಯುದ್ಧದಿಂದ ಬದಲಾದೇವೆ? » 2



ಭಾರತ ತೀವ್ರ ಆರ್ಥಿಕ ಸಂಕಷ್ಟ ಎದುರಿಸಲಿದೆ » 3



ಸೆಪ್ಟಂಬರ್ 12-13 ರಂದು ನವದೆಹಲಿಯಲ್ಲಿ ಬ್ರಿಕ್ಸ್ ಶೃಂಗಸಭೆ » 4

# ಅನಕ್ಷರಸ್ಥ, ಕ್ರೂರರ ಕೈಗೆ ದೇಶದ ಆಡಳಿತ

## ಕಾಂಗ್ರೆಸ್ ಸಾಧನಾ ಸಮಾವೇಶದಲ್ಲಿ ಮೋದಿ-ಅಮಿತ್ ಶಾ ವಿರುದ್ಧ ಸಿದ್ದರಾಮಯ್ಯ ವಾಗ್ದಾಳಿ

• ಪ್ರಜೋದಯ ವರದಿ

**ಬೆಂಗಳೂರು:** ದೇಶದ ಆಡಳಿತವನ್ನು ಅನಕ್ಷರಸ್ಥ ಮತ್ತು ಕ್ರೂರರ ಕೈಗಳಿಗೆ ಒಪ್ಪಿಸಿದ್ದೇವೆಂಬುದನ್ನು ನೆನಪಿಸಿ ಕೊಂಡರೆ ನಡುಕ ಉಂಟಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ಮೋದಿ, ಅಮಿತ್ ಶಾ ವಿರುದ್ಧ ವಾಗ್ದಾಳಿ ನಡೆಸಿದರು.



ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಮೂರು ವರ್ಷಗಳನ್ನು ಪೂರೈಸಿದ ಹಿನ್ನಲೆ ಮಂಗಳವಾರ ತುಮಕೂರಿನಲ್ಲಿ ನಡೆದ ಸಾಧನ ಸಮರ್ಪಣಾ ಸಮಾವೇಶದಲ್ಲಿ ಮಾತನಾಡಿದ ಅವರು, ಮೋರ್ಬಿ ಘಟನೆಯ ನಂತರ ಗುಜರಾತ್ ಅಭಿವೃದ್ಧಿ ಮಾದರಿ ಟೊಳ್ಳಾಗಿದೆ. ಮೋದಿ 2001 ರಿಂದ 2014 ರವರೆಗೆ ಗುಜರಾತ್ ಮುಖ್ಯಮಂತ್ರಿಯಾಗಿ ನಂತರ ಪ್ರಧಾನಿಯಾಗಿದ್ದಾರೆ. ಪ್ರಧಾನಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕಳೆದ 25 ವರ್ಷಗಳಿಂದ ಗುಜರಾತ್ ಅನ್ನು ಪ್ರತಿನಿಧಿಸಿದ್ದರು. ಗುಜರಾತ್‌ನಲ್ಲಿ ಸಾಮಾನ್ಯ ಜನರ ಜೀವನ ಯಾವ ಸ್ಥಿತಿಗೆ ತಲುಪಿದೆ ಎಂಬುದನ್ನು ನೀವು ತಿಳಿದು ಕೊಳ್ಳಬೇಕೆಂದರು.

ಇಂಧನ ಮತ್ತು ಅಡುಗೆ ಅನಿಲ ಬೆಲೆ ಏರಿಕೆಯನ್ನು ಟೀಕಿಸಿದ ಸಿದ್ದರಾಮಯ್ಯ ಅವರು, ಕೇಂದ್ರದ ನೀತಿಗಳು ಹಣದುಬ್ಬರವನ್ನು ಇನ್ನಷ್ಟು ಹದಗೆಡಿಸಿವೆ. ಪೆಟ್ರೋಲ್-ಡೀಸೆಲ್ ಮತ್ತು ಅನಿಲ ಬೆಲೆಗಳು ಆಕಾಶವನ್ನು ಮುಟ್ಟಿವೆ. ನರೇಂದ್ರ ಮೋದಿ ಅವರು ಅಮೇರಿಕಾದಲ್ಲಿ ಟ್ರಂಪ್ ಬಾಲ ಹಿಡಿದುಕೊಂಡು ಸುತ್ತಾಡುತ್ತಿದ್ದರು. ಅಲ್ಲಿ ಹೋದಾಗ ಟ್ರಂಪ್ ಸರ್ಕಾರ ಬರುತ್ತದೆ ಎಂದು ಭಾಷಣ ಮಾಡಿದರು. ಟ್ರಂಪ್ ಸರ್ಕಾರ ಬಂತು, ಇರಾನ್ ಮೇಲೆ ಯುದ್ಧವೂ ಆಯಿತು. ಇರಾನ್ ಮೇಲೆ ದಾಳಿ ಮಾಡಿದ್ದಕ್ಕೆ ಮೋದಿ ಒಮ್ಮೆಯೂ ವಿಷಾದಿಸಲಿಲ್ಲವೆಂದರು.

ಮೋದಿ ಅವರು ಪ್ರಧಾನಿ ಆದ ಮೇಲೆ ಲಾಭ ಪಡೆದುಕೊಂಡದ್ದು ಅಂಬಾನಿ, ಅದಾನಿ ಇಬ್ಬರು ಮಾತ್ರ. 2014 ರಲ್ಲಿ ಗೌತಮ್ ಅದಾನಿ ಆದಾಯ ಹದಿನಾರುವರೆ ಸಾವಿರ ಕೋ.ರೂ.ಇತ್ತು, ಇಂದು 8 ಲಕ್ಷ ಕೋ.ರೂ. ಗೆ ಏರಿಕೆಯಾಗಿದೆ. ಮುಕೇಶ್ ಅಂಬಾನಿ ಕೂಡ ಆರ್ಥಿಕವಾಗಿ ಬೆಳವಣಿಗೆ ಆಗಿದ್ದಾರೆ. ಆದರೆ, ಸಾಮಾನ್ಯ ಮತ್ತು ಮಧ್ಯಮ ವರ್ಗದ ವರಿಗೆ ಲಾಭವಾಗಿಲ್ಲವೆಂದು ಕುಟುಕಿದರು.

2023ರ ವಿಧಾನಸಭಾ ಚುನಾವಣೆಗೆ ಮುನ್ನ ಕಾಂಗ್ರೆಸ್ ಸರ್ಕಾರ ನೀಡಿದ್ದ ಭರವಸೆಗಳನ್ನು ಈಡೇರಿಸಿದೆ. 2023ರಿಂದ ರಾಜ್ಯವು ಐದು ಗ್ಯಾರಂಟಿ ಯೋಜನೆಗಳಿಗೆ 1,40, 233 ಕೋ. ರೂ.ಗಳನ್ನು ಖರ್ಚು ಮಾಡಿದೆ. ರೈತರ ಸಬ್ಸಿಡಿಗಳು, ಬರ, ಪ್ರವಾಹ , ಬೆಳೆ ಪರಿಹಾರ ಮತ್ತು ಸಂಬಂಧಿತ ವಲಯಗಳಿಗೆ ಸರ್ಕಾರ ಮೂರು ವರ್ಷಗಳಲ್ಲಿ ಸುಮಾರು 1 ಲಕ್ಷ ಕೋಟಿ ರೂ. ಖರ್ಚು ಮಾಡಿದೆ. ವಿಧವೆಯರು, ಹಿರಿಯ ನಾಗರಿಕರು, ಅಂಗವಿಕಲರು ಮತ್ತು ಇತರೆ ಫಲಾನುಭವಿಗಳಿಗೆ ಸಾಮಾಜಿಕ ಪಿಂಚಣಿ ಯೋಜನೆಗಳು ವಾರ್ಷಿಕ 11,000 ಕೋ.ರೂ.ಗಳಿಂದ 12,000 ಕೋ.ರೂ.ಗಳವರೆಗೆ ಖರ್ಚು ಮಾಡಿದೆ ಎಂದರು.

### ವೋಟ್ ಹಾಕಿದವರಿಗೆಲ್ಲಾ ಭ್ರಮನಿರಸನ

ಇಷ್ಟು ದಿನ ಮೋದಿ ಮೋದಿ ಅಂತ ಕೂಗಿ ವೋಟ್ ಹಾಕಿದವರಿಗೆಲ್ಲಾ ಈಗ ಭ್ರಮನಿರಸನವಾಗಿದೆ. ನಾವು ಅಧಿಕಾರಕ್ಕೆ ಬಂದ ಮೂರೇ ವರ್ಷದಲ್ಲಿ ಅನೇಕ ಅಭಿವೃದ್ಧಿ ಕೆಲಸಗಳನ್ನ ಮಾಡಿದ್ದೇವೆ. ಇಂದು ಇಡೀ ದೇಶದ ಜಿಎಸ್‌ಟಿ ಬೆಳವಣಿಗೆ 7.4 ಇದೆ. ಆದರೆ, ಕರ್ನಾಟಕದ ಜಿಎಸ್‌ಟಿ ಬೆಳವಣಿಗೆ 8.1 ರಷ್ಟಿದೆ. ಇದು ನಾವು ಸಾಮಾಜಿಕ, ಆರ್ಥಿಕವಾಗಿ ಉತ್ತಮವಾಗಿದ್ದೇವೆ ಎಂಬುದನ್ನು ತೋರಿಸುತ್ತದೆ. ಉಳಿದ ಎಲ್ಲಾ ಭರವಸೆಗಳನ್ನ ಈಡೇರಿಸುತ್ತೇವೆ, 2028ಕ್ಕೂ ನಾವೇ ಅಧಿಕಾರಕ್ಕೆ ಬರುತ್ತೇವೆಂದು ವಿಶ್ವಾಸ ವ್ಯಕ್ತಪಡಿಸಿದರು.

# ಸಾರಿಗೆ ನೌಕರರ ಮುಷ್ಕರಕ್ಕೆ ಹೈಕೋರ್ಟ್ ನಿರ್ಬಂಧ

• ಪ್ರಜೋದಯ ವರದಿ

**ಬೆಂಗಳೂರು:** ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆಎಸ್‌ಆರ್‌ಟಿಸಿ) ಸಿಬ್ಬಂದಿ ಟ್ರೇಡ್ ಯೂನಿಯನ್‌ಗಳ ಜಂಟಿ ಕ್ರಿಯಾ ಸಮಿತಿ ಕರೆ ಕೊಟ್ಟಿದ್ದ ಸಾರಿಗೆ ನೌಕರರ ಮುಷ್ಕರಕ್ಕೆ ಮಂಗಳವಾರ ಹೈಕೋರ್ಟ್ ನಿರ್ಬಂಧ ವಿಧಿಸಿದೆ.



ಮುಷ್ಕರವನ್ನು ಆಕ್ಷೇಪಿಸಿ ಸಿ. ವೇದಾವತಿ ಹಾಗು ಹೆಚ್.ವಿ.ಶ್ರೀಧರ್ ಎಂಬುವವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ನೇತೃತ್ವದ ರಜಾಕಾಲದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತು ಆದೇಶಿಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ವಿಕ್ರಮ್ ಹುಯಿಲಗೋಳ ಅವರು, ಕೂಡಲೇ ಮುಷ್ಕರ ಹಿಂಪಡೆಯಲು ಜಂಟಿ ಕ್ರಿಯಾ ಸಮಿತಿಗೆ ನಿರ್ದೇಶಿಸಬೇಕೆಂದು ನ್ಯಾಯಪೀಠಕ್ಕೆ ಮನವಿ ಮಾಡಿದರು. ಅದನ್ನು ಮಾನ್ಯ ಮಾಡಿದ ನ್ಯಾಯಪೀಠ, ಸರ್ಕಾರ ಸಾರಿಗೆ ಸಂಘಟನೆಗಳ ಜೊತೆ ಚರ್ಚೆ ನಡೆಸಲು ಮುಂದಾಗಬೇಕೆಂದು ಹೆಚ್ಚುವರಿ ಅಡ್ವೊಕೇಟ್ ಜನರಲ್ ತಾರಾನಾಥ ಪೂಜಾರಿ ಅವರಿಗೆ ನಿರ್ದೇಶಿಸಿತು. ರಾಜ್ಯ ಸರ್ಕಾರ ಮತ್ತು ಸಾರಿಗೆ ಸಂಘಟನೆಗಳಿಗೆ ನೋಟೀಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಅರ್ಜಿದಾರರ ಆಕ್ಷೇಪ ಏನು: ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಗಳೂ ಇದೇ 18ರಿಂದ ರಿಂದ 25ರವರೆಗೆ ನಡೆಯಲಿವೆ. ಗ್ರಾಮೀಣ ಮತ್ತು ಅರೆ ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳು ಸಾರ್ವಜನಿಕ ಬಸ್‌ಗಳನ್ನೇ ಅವಲಂಬಿಸಿದ್ದು ಮುಷ್ಕರದಿಂದ ಗಂಭೀರ ಸಮಸ್ಯೆ ಎದುರಾಗಲಿದೆ ಎಂದು ಅರ್ಜಿದಾರರು ಆತಂಕ ವ್ಯಕ್ತಪಡಿಸಿದ್ದಾರೆ. ದಿನಗೂಲಿ ಕಾರ್ಮಿಕರು, ರೋಗಿಗಳು, ವಯಸ್ಸಾದವರು ಮತ್ತು ಆರ್ಥಿಕವಾಗಿ ದುರ್ಬಲರೂ ಸಾರ್ವಜನಿಕ ಬಸ್ ಸೇವೆಯನ್ನೇ ಅವಲಂಬಿಸಿದ್ದು, ಮುಷ್ಕರದಿಂದ ಎಲ್ಲರಿಗೂ ತೊಂದರೆ ಉಂಟಾಗಲಿದೆ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ. ಪ್ರಕರಣದ ಮುಂದಿನ ವಿಚಾರಣೆ ಮೇ 21ರಂದು ನಡೆಯಲಿದೆ.

ನೌಕರರ ಬೇಡಿಕೆಗಳು: ಶೇ. 25 ರಷ್ಟು ವೇತನ ಏರಿಕೆ ಮಾಡಬೇಕೆಂಬ ಬೇಡಿಕೆ ಇದ್ದರೂ ಸರ್ಕಾರ ಏಕಪಕ್ಷೀಯವಾಗಿ ಶೇ. 12.5ರಷ್ಟು ಹೆಚ್ಚಿಸಿರುವುದು ಖಂಡನೀಯ. 2024ರ ಜ. 1ರಿಂದ ಅನ್ವಯವಾಗುವಂತೆ ವೇತನ ಪರಿಷ್ಕರಣೆ ಮಾಡಬೇಕೆಂದು ನೌಕರರು ಪಟ್ಟು ಹಿಡಿದಿದ್ದಾರೆ.

# ಬಕ್ರೀದ್ : ಬೇಲೂರಿನಲ್ಲಿ ಶಾಂತಿ ಸಭೆ



• ಪ್ರಜೋದಯ ವರದಿ

**ಬೇಲೂರು:** ಧಾರ್ಮಿಕ ಹಾಗು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಡಿಜೆ ಸೌಂಡ್ ಬಳಕೆಗೆ ಸರ್ಕಾರ ಕಠಿಣ ನಿರ್ಬಂಧ ವಿಧಿಸಿರುವ ಹಿನ್ನಲೆ ಸಾರ್ವಜನಿಕರು ಸಹಕಾರ ನೀಡಬೇಕು. ನಿಯಮ ಉಲ್ಲಂಘಿಸಿ ದರೆ ಶಿಸ್ತು ಕ್ರಮ ಕೈಗೊಳ್ಳಲಾಗುವುದೆಂದು ಪಟ್ಟಣ ಪೊಲೀಸ್ ಠಾಣೆಯ ಸಿಪಿಐ ರೇವಣ್ಣ ಅವರು ಎಚ್ಚರಿಕೆ ನೀಡಿದರು.

ಪಟ್ಟಣದ ನೆಹರು ನಗರ ಪೊಲೀಸ್ ಠಾಣೆಯಲ್ಲಿ ಬಕ್ರೀದ್ ಹಬ್ಬದ ಪ್ರಯುಕ್ತ ಆಯೋಜಿಸಿದ್ದ ಶಾಂತಿ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ಒಂದೂವರೆ ವರ್ಷಗಳಿಂದ ಬೇಲೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದರೂ ಯಾವುದೇ ಅಹಿತಕರ ಘಟನೆಗಳು ಸಂಭವಿಸಿಲ್ಲ. ಎಲ್ಲಾ ಧರ್ಮೀಯರು ಸೌಹಾರ್ದತೆಯಿಂದ ನಡೆದುಕೊಂಡು ನಾಡಿಗೆ ಉತ್ತಮ ಸಂದೇಶ ನೀಡುತ್ತಿದ್ದಾರೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಹಿಂದೂ ಹಾಗು ಮುಸ್ಲಿಂ ಸೇರಿ ಯಾವುದೇ ಧರ್ಮದ ಹಬ್ಬ, ಉತ್ಸವಗಳಲ್ಲಿ ಡಿಜೆ ಸೌಂಡ್ ಬಳಕೆಗೆ ಸಂಪೂರ್ಣ ನಿಷೇಧವಿರುವುದರಿಂದ ಸಾರ್ವಜನಿಕರು ಪೊಲೀಸ್ ಇಲಾಖೆಗೆ ಸಹಕಾರ ನೀಡಬೇಕು. ಪಟ್ಟಣದಲ್ಲಿ ಟ್ರಾಫಿಕ್ ನಿಯಂತ್ರಣಕ್ಕೆ ಪೊಲೀಸ್ ಇಲಾಖೆ ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿದ್ದರೂ ವಾಹನ ಸವಾರರು ಎಲ್ಲೆಂದರಲ್ಲಿ ವಾಹನ ನಿಲುಗಡೆ ಮಾಡುತ್ತಿರುವುದು ಸಮಸ್ಯೆಯಾಗುತ್ತಿದೆ. ನಿಯಮ ಉಲ್ಲಂಘಿಸುವವರ ವಿರುದ್ಧ ದಂಡ ವಿಧಿಸಲಾಗುತ್ತಿದ್ದು, ಕಳ್ಳತನ ಪ್ರಕರಣಗಳಿಗೆ ಸಹ ಕಡಿವಾಣ ಹಾಕಲಾಗಿದೆ ಎಂದು ತಿಳಿಸಿದರು.

ಕೆಲವೆಡೆ ಗಾಂಜಾ ಪ್ರಕರಣಗಳ

» **ನಾಲ್ಕನೇ ಪುಟದಲ್ಲಿ**

# ಆನೆಗಳ ಕಾದಾಟದಲ್ಲಿ ಗಾಯಗೊಂಡಿದ್ದ ಮಾರ್ತಾಂಡ ಸಾವು

## ದುಬಾರೆಯಲ್ಲಿ ದಾಳಿ ಮಾಡಿದ್ದ ಕಂಜನ್ | ಸಕಲೇಶಪುರದಲ್ಲಿ ಸೆರೆ ಹಿಡಿದಿದ್ದ ಓಲ್ಡ್ ಮಕ್ನಾ ಆನೆ | ಪ್ರಾಣಿ ಪ್ರಿಯರಲ್ಲಿ ಬೇಸರ

• ಪ್ರಜೋದಯ ವರದಿ

**ಹಾಸನ :** ದುಬಾರೆ ಆನೆ ಶಿಬಿರದಲ್ಲಿ ಸೋಮವಾರ ನಡೆದ ಸಾಕಾನೆಗಳ ನಡುವಿನ ಕಾದಾಟದ ವೇಳೆ ತೀವ್ರವಾಗಿ ಗಾಯಗೊಂಡಿದ್ದ ಮಾರ್ತಾಂಡ ಮಂಗಳವಾರ ಚಿಕಿತ್ಸೆ ಫಲಿಸದೆ ಮೃತಪಟ್ಟಿದೆ. ಪಶುವೈದ್ಯ ಡಾ. ಚಿಟ್ಟಿಯಪ್ಪ ನೇತೃತ್ವದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ದುಬಾರೆ ಅರಣ್ಯ ಪ್ರದೇಶದಲ್ಲಿಯೇ ಅಂತ್ಯಸಂಸ್ಕಾರ ನಡೆಸಲಾಯಿತು.

ಜಿಲ್ಲೆಯ ಮಲೆನಾಡು ಭಾಗದಲ್ಲಿ ಉಪಟಳ ನೀಡುತ್ತಿದ್ದ ಓಲ್ಡ್ ಮಕ್ನಾ ಕಾಡಾನೆ ಸೆರೆಯಾದ ಬಳಿಕ ಕುಶಾಲನಗರದ ದುಬಾರೆ ಆನೆ ಶಿಬಿರದಲ್ಲಿ ಮಾರ್ತಾಂಡನಾಗಿ ಹೊಸ ಜೀವನ ನಡೆಸುತ್ತಿದ್ದ ವೇಳೆ ಕಾಳಗದಲ್ಲಿ ಮೃತಪಟ್ಟಿರುವುದು ಪ್ರಾಣಿ ಪ್ರಿಯರಿಗೆ ನೋವುಂಟು ಮಾಡಿದೆ.

ಮೃತಪಟ್ಟ ಸಾಕಾನೆ ಮಾರ್ತಾಂಡನಿಗೂ ಜಿಲ್ಲೆಗೂ ಅವಿನಾಭಾವ ಸಂಬಂಧವಿದೆ. ಸೆರೆ ಹಿಡಿದು ದೂರದ ಮಲೇಮಹದೇಶ್ವರ ಬೆಟ್ಟ ವ್ಯಾಪ್ತಿಯ ಅರಣ್ಯ ಪ್ರದೇಶಕ್ಕೆ ಬಿಟ್ಟರೂ ವಾಪಾಸ್ ಜಿಲ್ಲೆಗೆ ಆಗಮಿಸಿತ್ತು. ಮೂರು ವರ್ಷಗಳ ಹಿಂದೆ 2023 ಮೇ 19ರಂದು ಸೆರೆ ಹಿಡಿದು ದುಬಾರೆಗೆ ಸಾಗಿಸಲಾ ಗಿತ್ತು. 2026 ಮೇ 19ರಂದು ಅದೇ ದಿನದಂದು



ಮೃತಪಟ್ಟಿರುವುದು ಕಾಕತಾಳೀಯ.

**ಮಲೆನಾಡು ಜನರ ನಿದ್ದೆ ಕೆಡಿಸಿದ್ದ ಮಕ್ನಾ**

ಮಾರ್ತಾಂಡನಾಗಿ ಬದಲಾಗುವ ಮುನ್ನ ಸಕಲೇಶಪುರ ಭಾಗದಲ್ಲಿ ಮಕ್ನಾವಾಗಿ ಗುರುತಿಸಿಕೊಂಡಿದ್ದ ಕಾಡಾನೆ, ಗ್ರಾಮಗಳಲ್ಲಿ ಭತ್ತ, ಅಕ್ಕಿ ಯ ವಾಸನೆ ಬೆನ್ನಟ್ಟಿ ರಾತ್ರಿ ಹೊತ್ತು ಊರೂರು ಅಲೆದಾಡುತ್ತಿತ್ತು. ನ್ಯಾಯಬೆಲೆ ಅಂಗಡಿಗಳಿಗೆ ನುಗ್ಗಿ ಅಕ್ಕಿ ತಿನ್ನುತ್ತಾ, ಅಪಾರ ಪ್ರಮಾಣದ ಬೆಳೆ ಹಾನಿ ಜೊತೆಗೆ ಆಸ್ತಿಪಾಸ್ತಿಗಳು ಮತ್ತು ಜನರಿಗೆ ತೀವ್ರ ತೊಂದರೆ ಉಂಟು ಮಾಡುತ್ತಿತ್ತು. ಆದ್ದರಿಂದ 2022 ಜೂನ್ 29ರಂದು ಸೆರೆ ಹಿಡಿದು ರೇಡಿಯೋ ಕಾಲರ್ ಅಳವಡಿಸಿ ದೂರದ ಮಲೇಮಹದೇಶ್ವರ ಬೆಟ್ಟ ವ್ಯಾಪ್ತಿಯ ಅರಣ್ಯ ಪ್ರದೇಶಕ್ಕೆ ಬಿಟ್ಟು ಬರಲಾಗಿತ್ತು. ಆದರೆ, ಸುಮಾರು 40 ರಿಂದ 45 ದಿನಗಳ ನಂತರ ಅಲ್ಲಿಂದ ನಡೆದು ವಾಪಾಸ್ ಬಂದಿದ್ದ ಈ



ಆನೆ, ಈ ಹಿಂದೆ ದಾಳಿ ನಡೆಸಿದ್ದ ಸಕಲೇಶಪುರ ತಾಲ್ಲೂಕಿನ ಕೆಸಗುಲಿ ಗ್ರಾಮದ ಗಿರೀಶ್ ಎಂಬುವವರ ಮನೆ ಮೇಲೆ ದಾಳಿ ನಡೆಸಿ, ಮನೆಯ ಕಿಟಕಿ ಗಾಜುಗಳನ್ನು ಪುಡಿ ಮಾಡಿತ್ತು.

2022ರ ಏಪ್ರಿಲ್ 22 ರಂದು ಬೇಲೂರು ತಾಲ್ಲೂಕಿನ ಅನುಘಟ್ಟ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಗೋದಾಮಿನ ಮೇಲೆ ದಾಳಿ ನಡೆಸಿ, ಅಕ್ಕಿಯನ್ನು ತಿಂದು ಹೋಗಿತ್ತು. ಮತ್ತೆ 2023 ಫೆ.15 ರಂದು ಅದೇ ಗೋದಾಮಿನ ಮೇಲೆ ದಾಳಿ ನಡೆಸಿ, ಅಕ್ಕಿ ತಿಂದು ಹೋಗಿದೆ. ರೇಡಿಯೋ ಕಾಲರ್ ಅಳವಡಿಸಿರುವುದರಿಂದಲೇ ಇದೇ ಆನೆ ದಾಳಿ ನಡೆಸುತ್ತಿದೆ ಎಂಬುದು ಗೊತ್ತಾಗಿತ್ತು. ನಿರಂತರ ಉಪಟಳ ನೀಡುತ್ತಿದ್ದ ಮಕ್ನಾ ಆನೆಯನ್ನು 2023 ಮೇ 19ರಂದು ಸಕಲೇಶಪುರ ತಾಲ್ಲೂಕಿನ ಬಾಗೆ ಗ್ರಾಮದ ಬಳಿ ಸೆರೆ ಹಿಡಿದು ಸ್ಥಳಾಂತರ ಮಾಡಲಾಗಿತ್ತು.

### ಪಳಗಿದ ಬಳಿಕ ಮೃದು ಸ್ವಭಾವ

ಸೆರೆ ಕಾರ್ಯಾಚರಣೆ ನಡೆಯುವ ಹಿಂದಿನ ದಿನ ಸಕಲೇಶಪುರ ತಾಲ್ಲೂಕಿನ ಕೊಲ್ಲಹಳ್ಳಿ ಗ್ರಾಮದ ನ್ಯಾಯಬೆಲೆ ಅಂಗಡಿಗೆ ನುಗ್ಗಿ ದಾಂಧಲೆ ನಡೆಸಿತ್ತು. ಅಲ್ಲಿದ್ದ ಅಕ್ಕಿ ಚೀಲಗಳನ್ನು ರಾಷ್ಟ್ರೀಯ ಹೆದ್ದಾರಿ-75ರ ಮಧ್ಯ ರಸ್ತೆಗೆ ಎಳೆದು ತಂದು, ತಿಂದು ಹಾಕಿತ್ತು. ಪಡಿತರ ಪಡೆಯಲು ಬಂದಿದ್ದ ಜನರು, ಕಾಡಾನೆ ಕಂಡು ಆತಂಕಕ್ಕೆ ಒಳಗಾಗಿದ್ದರು.

ಮಕ್ನಾನಾಗಿ ಮಲೆನಾಡು ಭಾಗದಲ್ಲಿ ಜನರಿಗೆ ಉಪಟಳ ನೀಡುತ್ತಿದ್ದ ಕಾಡಾನೆ, ಸೆರೆ ಸಿಕ್ಕ ಬಳಿಕ ಶಿಬಿರ ಜೀವನದಲ್ಲಿ ಮೃದು ಸ್ವಭಾವಕ್ಕೆ ತಿರುಗಿ ಅರಣ್ಯ ಸಿಬ್ಬಂದಿಯ ಆತ್ಮೀಯತೆಯನ್ನೂ ಗಳಿಸಿತ್ತು. ಆದರೆ ಕೊನೆಗೆ ತನ್ನ ಸಹಪಾರ್ಟಿಯೊಂದಿಗಿನ ಕಾಳಗದಲ್ಲಿ ಮೃತಪಟ್ಟಿರುವುದು ಬೇಸರ

# ಸಮಾವೇಶಕ್ಕೆ ಬಸ್ ವ್ಯವಸ್ಥೆ : ಪ್ರಯಾಣಿಕರಿಗೆ ತೊಂದರೆ

## ಜಿಲ್ಲೆಯಾದ್ಯಂತ ಸಾರಿಗೆ ಸೇವೆಯಲ್ಲಿ ವ್ಯತ್ಯಯ

• ಪ್ರಜೋದಯ ವರದಿ

**ಹಾಸನ:** ರಾಜ್ಯ ಸರ್ಕಾರದ 3 ವರ್ಷದ ಸಾಧನೆ ಅಂಗವಾಗಿ ತುಮಕೂರಿನಲ್ಲಿ ನಡೆದ ಸಾಧನಾ ಸಮಾವೇಶಕ್ಕೆ ಜನರನ್ನು ಕರೆದೊಯ್ಯಲು ನಗರದ ಸಾರಿಗೆ ವಿಭಾಗದ ಬಸ್‌ಗಳನ್ನು ಹೆಚ್ಚಾಗಿ ನಿಯೋಜಿಸಿದ ಪರಿಣಾಮ ಸೋಮವಾರ ಜಿಲ್ಲೆಯಾದ್ಯಂತ ಸಾರ್ವಜನಿಕ ಸಾರಿಗೆ ಸೇವೆಯಲ್ಲಿ ವ್ಯತ್ಯಯ ಉಂಟಾಗಿ ಪ್ರಯಾಣಿಕರು ತೊಂದರೆ ಪಡುವಂತಾಯಿತು.



ಜಿಲ್ಲೆಯ ಹಾಸನ, ಚನ್ನರಾಯಪಟ್ಟಣ, ಅರಸೀಕೆರೆ, ಬೇಲೂರು ಹಾಗು ಅರಕಲಗೂಡು ಸೇರಿ ವಿವಿಧ ತಾಲ್ಲೂಕು ಕೇಂದ್ರಗಳಿಂದ ಸಮಾವೇಶಕ್ಕೆ ಕಾರ್ಯಕರ್ತರು ತೆರಳಿದ್ದರಿಂದ ನಿಗದಿತ ಮಾರ್ಗಗಳಲ್ಲಿ ಸಂಚರಿಸಬೇಕಿದ್ದ ಬಹುತೇಕ ಬಸ್‌ಗಳು ತುಮಕೂರಿಗೆ ಕಳುಹಿಸಲಾಯಿತು. ಇದರಿಂದ ಜಿಲ್ಲಾ ಕೇಂದ್ರ ಹಾಗು ಗ್ರಾಮೀಣ ಭಾಗಗಳಿಗೆ ತೆರಳುವ ಪ್ರಯಾಣಿಕರು ನಿಲ್ದಾಣಗಳಲ್ಲಿ ಗಂಟೆಗಟ್ಟಲೆ ಕಾಯಬೇಕಾದ ಸ್ಥಿತಿ ನಿರ್ಮಾಣವಾಯಿತು. ವಾರದ ಸಂತೆ ದಿನವೇ ಬಸ್ ಕೊರತೆ ಉಂಟಾದ ಹಿನ್ನಲೆ ನಗರ ಹಾಗು ತಾಲ್ಲೂಕು ಕೇಂದ್ರಗಳಲ್ಲಿ ರೈತರು, ವ್ಯಾಪಾರಿಗಳು ಮತ್ತು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ನಿಲ್ದಾಣಗಳಿಗೆ ಆಗಮಿಸಿದ್ದರೂ, ಸಮಯಕ್ಕೆ ಬಸ್ ಸಿಗದೆ ಸಮಸ್ಯೆ ಎದುರಿಸಬೇಕಾಯಿತು. ಬಸ್ ನಿಲ್ದಾಣ ಹಾಗು ನಗರ ಸಾರಿಗೆ ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರ ದಟ್ಟಣೆ ಹೆಚ್ಚಾಗಿ ಗೊಂದಲದ ವಾತಾವರಣ ನಿರ್ಮಾಣವಾಯಿತು.

» **ನಾಲ್ಕನೇ ಪುಟದಲ್ಲಿ**

# ನಾಳೆ ಬಾಳ್ಳುಪೇಟೆಯಲ್ಲಿ ಭೀಮೋತ್ಸವ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಬಾಳ್ಳುಪೇಟೆಯಲ್ಲಿ ಮೇ 21ರ ಗುರುವಾರ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಅಂಗವಾಗಿ ಭೀಮೋತ್ಸವ ಹಮ್ಮಿಕೊಳ್ಳಲಾಗಿದೆ.

ಪಟ್ಟಣದ ಕೆಂಚಮ್ಮ ಮಲ್ಲೇಗೌಡ ಸಮುದಾಯ ಭವನದಲ್ಲಿ ಬೆಳಿಗ್ಗೆ 10.30ಕ್ಕೆ ಕಾರ್ಯಕ್ರಮ ಆರಂಭವಾಗಲಿದೆ. ಶಾಸಕ ಸಿಮೆಂಟ್ ಮಂಜು ಉತ್ಸವಕ್ಕೆ ಚಾಲನೆ ನೀಡುವರು. ಸಂಸದ ಶ್ರೇಯಸ್ ಪಟೇಲ್, ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ, ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಮುರಳಿ ಮೋಹನ್, ಬಿಎಸ್ಪಿ ಜಿಲ್ಲಾಧ್ಯಕ್ಷ ಲಕ್ಷ್ಮಣ್ ಕೀರ್ತಿ ಮತ್ತಿತರರು ಪಾಲ್ಗೊಳ್ಳಲಿದ್ದಾರೆ. ಚಿಂತಕ ಡಾ. ಶಿವಕುಮಾರ್ ಅಂಬೇಡ್ಕರ್ ಕುರಿತು ಉಪನ್ಯಾಸ ನೀಡಲಿದ್ದಾರೆ.

# ಜಿಲ್ಲೆಯಲ್ಲಿ ಕಾರ್ಮಿಕರ ಅಕ್ರಮ ಬಂಧನ ಜಾಲ ಸಕ್ರಿಯ

-ಮಲ್ಲಿಕಾರ್ಜುನ ಕೊಚ್ಚರಗಿ

## ▪ ಬಲಾಢ್ಯರ ಕೈಗೆ ಸಿಲುಕಿ ನಲುಗುತ್ತಿವೆ ಬಡ ಜೀವಗಳು
## ▪ ಮಕ್ಕಳ ಶಿಕ್ಷಣವೂ ಮರೀಚಿಕೆ

• ಪ್ರಜೋದಯ ವರದಿ

**ಹಾಸನ:** ಕೈತುಂಬಾ ಸಂಬಳ, ಸುಸಜ್ಜಿತ ವಸತಿ ವ್ಯವಸ್ಥೆ ಕಲ್ಪಿಸುತ್ತೇವೆಂಬ ಬಣ್ಣದ ಮಾತುಗಳನ್ನು ನಂಬಿ ಹೊರ ರಾಜ್ಯ ಹಾಗು ಜಿಲ್ಲೆಗಳಿಂದ ಬರುವ ಕಾರ್ಮಿಕರನ್ನು ಅಕ್ರಮ ಬಂಧನದ ಮೂಲಕ ನರಕ ಯಾತನೆಗೆ ತಳ್ಳುವ ಜಾಲ ಸಕ್ರಿಯವಾಗಿದೆ ಎಂಬ ಆರೋಪಗಳು ಕೇಳಿ ಬಂದಿದೆ.





ಮೊದಲೆಲ್ಲಾ ಮಲೆನಾಡು ಭಾಗದ ಕಾಫಿ ತೋಟಗಳಲ್ಲಿ ಮಾತ್ರ ಹೊರ ರಾಜ್ಯದ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಿದ್ದರು. ಇತ್ತೀಚೆಗೆ ಕಟ್ಟಡ, ಶುಂಠಿ ಜಮೀನುಗಳಲ್ಲಿ ಕೆಲಸ ಮಾಡಲು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರನ್ನು ಕರೆದುಕೊಂಡು ಬರಲಾಗುತ್ತಿದೆ. ಆದರೆ, ಕಾರ್ಮಿಕರ ಹಕ್ಕುಗಳನ್ನು ಸಂಪೂರ್ಣ ಗಾಳಿಗೆ ತೂರಿ ಅವರಿಗೆ ಚಿತ್ರಹಿಂಸೆ ನೀಡಲಾಗುತ್ತಿದೆ ಎಂಬ ಗಂಭೀರ ದೂರುಗಳು ವ್ಯಾಪಕವಾಗಿವೆ.

ಸೋಮವಾರ ನಗರದ ಹೈಸ್ಕೂಲ್ ಫೀಲ್ಡ್‌ನಲ್ಲಿ 9 ಮಕ್ಕಳು ಸೇರಿ 35 ಕಾರ್ಮಿಕರನ್ನು ರಕ್ಷಿಸಲಾಗಿದೆ. ಏಪ್ರಿಲ್ 1ರಂದು ಅರಸೀಕೆರೆ ತಾಲ್ಲೂಕಿನ ಜಾವಗಲ್ ಹಾಗು ಮಾರ್ಚ್‌ನಲ್ಲಿ ಹಳೇಬೀಡು ಹೋಬಳಿಯಲ್ಲಿ ಅಕ್ರಮ ಬಂಧನದಲ್ಲಿದ್ದ ಕಾರ್ಮಿಕರನ್ನು ರಕ್ಷಿಸಲಾಗಿತ್ತು. ಕಳೆದ ವರ್ಷ ಹೊಳೆನರಸೀಪುರದ ಫ್ಯಾಕ್ಟರಿಯೊಂದರಲ್ಲಿ ಕೆಲಸ ಮಾಡಿಕೊಂಡಿದ್ದ ಹೊರ ರಾಜ್ಯದ ಆರು ಕಾರ್ಮಿಕರನ್ನು ರಕ್ಷಿಸಿ ಅವರ ರಾಜ್ಯಕ್ಕೆ ಕಳುಹಿಸಿಕೊಡಲಾಗಿತ್ತು. ಜಿಲ್ಲೆಯಲ್ಲಿ ಈ ರೀತಿಯ ಪ್ರಕರಣಗಳು ಬೆಳಕಿಗೆ ಬರುತ್ತಲೇ ಇದ್ದು, ಕಾನೂನು ಉಲ್ಲಂಘಿಸಿ ಕೆಲಸ ಮಾಡಿಸಿಕೊಳ್ಳುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ ಕಾರ್ಮಿಕ ಇಲಾಖೆ ಅಥವಾ ಜಿಲ್ಲಾಡಳಿತ ಹಿಂದೇಟು ಹಾಕುತ್ತಿದೆ ಎಂಬ ಆರೋಪಗಳು ಕೇಳಿ ಬಂದಿವೆ.

**250 ರೂ. ಸಂಬಳ-ಊರಿಗೆ ಹೋಗುವಂತಿಲ್ಲ**

ಹಾಸನದಲ್ಲಿ ಸೋಮವಾರ ರಕ್ಷಿಸಲ್ಪಟ್ಟ ಕಾರ್ಮಿಕರ ಗೋಳು ಹೇಳ ತೀರದಾಗಿದೆ. ಬಿಎಸ್‌ಆರ್ ಎಂಬ ಪ್ರತಿಷ್ಠಿತ ಕಂಪನಿ ನಡೆಸುತ್ತಿರುವ ಕಟ್ಟಡ ಕಾಮಗಾರಿಗೆ ಕೆಲಸಕ್ಕೆಂದು ತೆಲಂಗಾಣದಿಂದ ಕಾರ್ಮಿಕರನ್ನು ಕರೆಸಿಕೊಳ್ಳಲಾಗಿದೆಯಂತೆ. ಆರು ತಿಂಗಳಿನಿಂದ ಸರ್ಕಾರಿ ಕಚೇರಿ ಕಟ್ಟಡ ಕೆಲಸದಲ್ಲಿ ಕಾರ್ಮಿಕರು ನಿರತರಾಗಿದ್ದಾರೆ. ದಿನಕ್ಕೆ 550 ರೂ. ವೇತನ ನೀಡುವುದಾಗಿ ಹೇಳಿದ್ದ ಕಂಪನಿಯವರು ಕೇವಲ 250 ರೂ. ನೀಡುತ್ತಾರೆಂಬ ಮಾಹಿತಿ ಬಹಿರಂಗವಾಗಿದೆ. ಜಾತ್ರೆ, ಹಬ್ಬ ಹರಿದಿನಗಳಲ್ಲಿ ಊರಿಗೆ ಹೋದರೆ ವಾಪಾಸ್ ಬರುವುದಿಲ್ಲವೆಂಬ ಕಾರಣಕ್ಕೆ ವೇತನ ತಡೆಹಿಡಿಯುವುದು, ಎಲ್ಲರಿಗೂ ಒಟ್ಟಿಗೆ ರಜೆ ನೀಡದೆ ಇರುವುದು, ಮೊಬೈಲ್ ಬಳಕೆ ನಿಷೇಧ ಹೀಗೆ ನಾನಾ ಷರತ್ತುಗಳನ್ನು ವಿಧಿಸಿದ್ದಾರೆ. ಇಷ್ಟು ಮಾತ್ರವಲ್ಲದೆ ಒಂಬತ್ತು ಮಕ್ಕಳು ಪೋಷಕರ ಜೊತೆಗೆ ಇದ್ದು ಅವರ ಶೈಕ್ಷಣಿಕ ಭವಿಷ್ಯಕ್ಕೆ ಮಂಕು ಕವಿದಿದೆ. ನಗರದ ಹೃದಯ ಭಾಗದಲ್ಲೇ ಕಾರ್ಮಿಕರು ಅಕ್ರಮ ಬಂಧನದಲ್ಲಿದ್ದು ಯಾರಿಗೂ ಗೊತ್ತಾಗದೆ ಇರುವುದು ನಾಗರಿಕ ಸಮಾಜ ತಲೆ ತಗ್ಗಿಸುವ ವಿಚಾರವಾಗಿದೆ.

**ಅಸಹಾಯಕತೆ ದುರುಪಯೋಗ**

ಕಾಫಿ ತೋಟ, ಶುಂಠಿ, ಕಟ್ಟಡ ಕೆಲಸಗಳಿಗೆ ಅಧಿಕ ಸಂಖ್ಯೆಯ ಕಾರ್ಮಿಕರು ಬೇಕಿರುವುದರಿಂದ ಅದಕ್ಕೆ ಜನರ ವ್ಯವಸ್ಥೆ ಮಾಡಿಕೊಡುವ ಒಂದು ವರ್ಗವೇ ಹುಟ್ಟಿಕೊಂಡಿದೆ. ಉದ್ಯೋಗದಾತ ಹಾಗು ಕಾರ್ಮಿಕರ ನಡುವೆ ಸೇತುವೆಯಾಗಿ ಕೆಲಸ ಮಾಡುವ ಅವರು ಕಮಿಷನ್ ಪಡೆದ ಜೀವನ ನಡೆಸುತ್ತಾರೆ. ರೈಲ್ವೆ ನಿಲ್ದಾಣ, ಬಸ್ ನಿಲ್ದಾಣಗಳಲ್ಲಿ ದಿಕ್ಕು ದೆಸೆಯಿಲ್ಲದವರಂತೆ ನಿಂತ ಜನರಿಗೆ ಉದ್ಯೋಗ ಕೊಡಿಸುವುದಾಗಿ ನಂಬಿಸಿ ಇಂತಹ ಅಮಾನುಷ ಕೆಲಸಗಳಲ್ಲಿ ತೊಡಗಿಸುತ್ತಾರೆ. ಯಾವುದಾದರೂ ಒಂದು ಉದ್ಯೋಗ ಸಿಕ್ಕರೆ ಸಾಕೆಂದು ಜನರು ಮೋಸದ ಬಲೆಗೆ ಬೀಳುತ್ತಾರೆ. ಒಂದು ಸಾರಿ ಈ ವ್ಯೂಹದೊಳಗೆ ಸಿಕ್ಕಿಬಿದ್ದರೆ ಬಿಡಿಸಿಕೊಳ್ಳುವುದು ಭಾರೀ ಕಷ್ಟವೆಂದು ಕಾರ್ಮಿಕರೊಬ್ಬರು ಹೇಳಿದರು.

**ಕಾರ್ಮಿಕ ಇಲಾಖೆ ಗಮನ ಹರಿಸಲಿ**

ಕಾರ್ಮಿಕ ಹಕ್ಕುಗಳ ರಕ್ಷಣೆಗಾಗಿ ಕೆಲಸ ಮಾಡುವ ಇಲಾಖೆ ಅಧಿಕಾರಿಗಳು ಇಂತಹ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಸಂಶಯಾಸ್ಪದ ಸ್ಥಳಗಳಿಗೆ ದಿಢೀರ್ ಭೇಟಿ ನೀಡಿ ಮುಗ್ಧ ಜನರನ್ನು ಸಂಕಷ್ಟದಿಂದ ಪಾರು ಮಾಡಬಹುದು. ಕೇವಲ ಆರು ತಿಂಗಳಲ್ಲಿ ನಾಲ್ಕು ಕಡೆ ಜೀತ ಕಾರ್ಮಿಕರು ಪತ್ತೆಯಾಗಿದ್ದಾರೆಂದರೆ ಇನ್ನಷ್ಟು ಪರಿಶೀಲನೆ ಕೈಗೊಂಡರೆ ಸಾಕಷ್ಟು ಜನರನ್ನು ಸಂಕಷ್ಟದಿಂದ ಪಾರು ಮಾಡಬಹುದಾಗಿದೆ.

# ವಿದ್ಯಾರ್ಥಿನಿಯರ ನೆರವಿಗೆ ಬಂತು ದೂರು ಪೆಟ್ಟಿಗೆ

• ಪ್ರಜೋದಯ ವರದಿ

**ಹಾಸನ:** ಗ್ರಾಮೀಣ ಭಾಗದ ಶಾಲಾ ವಿದ್ಯಾರ್ಥಿನಿಯರ ನೆರವಿಗಾಗಿ ಪೊಲೀಸ್ ಇಲಾಖೆಯಿಂದ ದೂರು/ಸಲಹಾ ಪೆಟ್ಟಿಗೆ ಯೋಜನೆ ಅನುಷ್ಠಾನಗೊಳಿಸಿದ್ದು, ಯಾವುದೇ ಸಮಸ್ಯೆ ಇದ್ದರೂ ಮಕ್ಕಳು ಪತ್ರದ ಮೂಲಕ ತಿಳಿಸಬಹುದಾಗಿದೆ.

ಚಾಮರಾಜನಗರ ಜಿಲ್ಲೆಯ ಬಳಿಕ ಹಾಸನದಲ್ಲಿ ಈ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ. ನಗರ ಪ್ರದೇಶಗಳಿಂದ ದೂರವಿರುವ, ಮೊಬೈಲ್ ಮತ್ತಿತರ ಸಾಧನ ಸಂಪರ್ಕಗಳ ಸೌಲಭ್ಯವಿಲ್ಲದ ಮಕ್ಕಳು ತಮ್ಮ ಸಮಸ್ಯೆ ಹೇಳಿಕೊಳ್ಳಲು ಪರದಾಡುತ್ತಿದ್ದಾರೆ. ಬಾಲ್ಯ ವಿವಾಹ, ಪೋಕ್ಸೋ, ದೌರ್ಜನ್ಯ, ಕೌಟುಂಬಿಕ ಕಲಹ ಹೀಗೆ ನಾನಾ ಸಮಸ್ಯೆಗಳಿಂದ ವ್ಯಾಸಂಗದತ್ತ ಆಸಕ್ತಿ ತೋರಿಸಲು ಸಾಧ್ಯವಾಗುವುದಿಲ್ಲ. ಅಂತಹ ವಿದ್ಯಾರ್ಥಿಗಳು ದೂರು ಪೆಟ್ಟಿಗೆಯಲ್ಲಿ ಬರೆದು ಹಾಕಿದರೆ ಸಮಸ್ಯೆಗೆ ಪರಿಹಾರ ಕಲ್ಪಿಸುವ ಕೆಲಸವನ್ನು ಪೊಲೀಸ್ ಇಲಾಖೆ ಮಾಡಲಿದೆ.



ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ಮಂಗಳವಾರ ದೂರು/ಸಲಹಾ ಪೆಟ್ಟಿಗೆ ಬಿಡುಗಡೆಗೊಳಿಸಿ ಮಾತನಾಡಿದ ದಕ್ಷಿಣ ವಲಯ ಐಜಿ ಬೋರಲಿಂಗಯ್ಯ ಅವರು, ಜನಸ್ನೇಹಿ ಪೊಲೀಸ್ ವಾತಾವರಣ ಸೃಷ್ಟಿಗಾಗಿ ಹತ್ತು ಹಲವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಗ್ರಾಮೀಣ ಭಾಗದ ಹೆಣ್ಣು ಮಕ್ಕಳನ್ನು ಕೇಂದ್ರೀಕರಿಸಿ ಸಲಹಾ ಪೆಟ್ಟಿಗೆ ಸ್ಥಾಪಿಸಲಾಗುತ್ತಿದೆ. ಜಿಲ್ಲೆಯ 51 ಪ್ರಾಥಮಿಕ ಹಾಗು ಪ್ರೌಢ ಶಾಲೆಯಲ್ಲಿ ಪ್ರಾಯೋಗಿಕವಾಗಿ ಪೆಟ್ಟಿಗೆ ಅಳವಡಿಸಲಾಗುವುದು. ಪ್ರತಿ 15 ದಿನಕ್ಕೊಮ್ಮೆ ಶಾಲೆಯ ವ್ಯಾಪ್ತಿಯ ಪೊಲೀಸ್ ಠಾಣೆಯ ಸಿಬ್ಬಂದಿ ಅದನ್ನು ತೆರೆದು ಪತ್ರಗಳನ್ನು ತರುತ್ತಾರೆ. ಪೆಟ್ಟಿಗೆಯ ಕೀ ಇನ್ಸಪೆಕ್ಟರ್ ಬಳಿ ಇರುತ್ತದೆ. ಏನೇ ಸಮಸ್ಯೆ ಇದ್ದರೂ ಮಕ್ಕಳು ದೂರು ಹೇಳಿಕೊಳ್ಳಬಹುದೆಂದರು.

ಸಮಸ್ಯೆ ಇದ್ದರೆ ಮಾತ್ರ ಪತ್ರ ಬರೆಯುವುದಲ್ಲ, ಏನೇ ಸಲಹೆ, ಸೂಚನೆ ನೀಡಲು ಪೆಟ್ಟಿಗೆಯನ್ನು ಉಪಯೋಗಿಸಬಹುದು. ಮಲೆನಾಡು ಭಾಗದಲ್ಲಿ ಶಾಲೆಗೆ ಬರಲು ಅನೇಕ ಸಮಸ್ಯೆಗಳಿರುತ್ತವೆ. ಅಧಿಕಾರಿ ಹಾಗು ಪೋಷಕರ ವಿವೇಚನೆಗೆ ಬಾರದ ಪರಿಹಾರೋಪಾಯಗಳು ಮಕ್ಕಳಲ್ಲಿ ಇರಬಹುದು. ಅಂತಹ ವಿಷಯಗಳಿದ್ದರೆ ಸಲಹಾ ಪೆಟ್ಟಿಗೆ ಮೂಲಕ ಹೇಳಬಹುದು. ಪ್ರಾಯೋಗಿಕವಾಗಿ ಜಿಲ್ಲೆಯ 51 ಶಾಲೆಗಳಲ್ಲಿ ಅದರಲ್ಲೂ ಪ್ರೌಢ ಶಾಲೆಗಳಲ್ಲಿ ಪೆಟ್ಟಿಗೆ ಅಳವಡಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಯಲ್ಲೂ ಇಡುವ ವ್ಯವಸ್ಥೆ ಮಾಡಲಾಗುವುದೆಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಕೆ.ತಮ್ಮಯ್ಯ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ.ಎನ್.ಬಲರಾಮ್, ಡಿವೈಎಸ್ಪಿ ಗಂಗಾಧರ್ ಮತ್ತಿತರರಿದ್ದರು.


# ಕೋವಿಡ್‌ನಿಂದ ಬದಲಾಗದ ನಾವು ಯುದ್ಧದಿಂದ ಬದಲಾದೇವೆ?

**ದೇಶದ ಆರ್ಥಿಕತೆ ಎಂಬುದು ನಾವು ದುಡಿಯುವ ಹಣದ ಮೇಲೆ ಮಾತ್ರವೇ ಅಲ್ಲ, ನಾವು ಮಾಡುವ ಖರ್ಚಿನ ಮೇಲೆಯೂ ಅವಲಂಬಿಸಿದೆ ಎಂಬುದು ನಮಗೆ ಅರ್ಥವಾಗುತ್ತಿಲ್ಲ. ಬೆಲೆ ಏರಿಕೆಯನ್ನು ಖಂಡಿಸುತ್ತಲೇ ನಮ್ಮ ದುಂದುವೆಚ್ಚವನ್ನೂ ಹೆಚ್ಚಿಸುತ್ತಿದ್ದೇವೆ. ನಾವು ಬದಲಾಗುವುದಿಲ್ಲ. ಆದರೆ ದೇಶ ಬದಲಾಗಬೇಕು.**

ಪದಸಾಗರ

ಪೆಟ್ರೋಲ್ ರೇಟ್ ಎಷ್ಟಾದರೇನಂತೆ, ನಾವಂತೂ ಹಂಡ್ರೆಡ್ಡೇ ಹಾಕಿಸೋದು ಅಂತ ಮೊದಲೆಲ್ಲ ಬಹಳ ಹಗುರವಾಗಿ ತೆಗೆದುಕೊಳ್ಳುತ್ತಿದ್ದೆವು. ಪೆಟ್ರೋಲ್ ಡೀಸೆಲ್ ಬೆಲೆ ಮಧ್ಯರಾತ್ರಿಯಿಂದಲೇ ಒಂದು ರುಪಾಯಿ ಏರಿಕೆ ಎಂಬ ಸುದ್ದಿ ಬಂದ ಕೂಡಲೇ ಪೆಟ್ರೋಲ್ ಬಂಕ್ ಮುಂದೆ ಕ್ಯೂ ನಿಲ್ಲುತ್ತಿದ್ದ ಗಾಡಿಗಳನ್ನು ನೋಡಿ ವಿಚಿತ್ರ ಅನಿಸುತ್ತಿತ್ತು. ಇವರೆಲ್ಲರೂ ಫುಲ್ ಟ್ಯಾಂಕ್ ಪೆಟ್ರೋಲ್ ಹಾಕಿಸಿದರೂ ಉಳಿಸೋದು ಅಬ್ಬಬ್ಬಾ ಅಂದರೆ ಮೂವತ್ತೋ ನಲವತ್ತೋ ರುಪಾಯಿ.

ಕಾರುಗಳಾದರೆ ನೂರು ನೂರೈವತ್ತು ರುಪಾಯಿ. ಇದು ನಿಜಕ್ಕೂ ಸನ್ನಿಯಲ್ಲವಾ ಅಥವಾ ಮೂರ್ಖತನವಲ್ಲವಾ ಅಂದುಕೊಳ್ಳುತ್ತಿದ್ದೆ. ಕೆಲವರಂತೂ ಅದೇ ನೂರು ರುಪಾಯಿ ಪೆಟ್ರೋಲ್ ಹಾಕಿಸೋದಕ್ಕೂ ಕ್ಯೂ ನಿಂತು ಬಿಡುತ್ತಿದ್ದರು. ಒಂದು ಎರಡು ರುಪಾಯಿ ಉಳಿಸಿಯಿಸೋದಾದ್ರೂ ಏನು ಅಂತೆಲ್ಲ ಅನಿಸುತ್ತಿತ್ತು. ಆದರೆ ಒಂದೊಂದು ರುಪಾಯಿ ಉಳಿತಾಯವೂ ಎಷ್ಟು ಮುಖ್ಯ ಎಂಬುದನ್ನು ಕಾಲ ಅರ್ಥ ಮಾಡಿಸುತ್ತದೆ.



ಹಣದ ಬೆಲೆ ಏನು ಎಂಬುದನ್ನು ಜೀವನದ ಏರುಪೇರುಗಳು ತಿಳಿಸಿ ಕೊಡುತ್ತವೆ. ಇಪ್ಪತ್ತೊಂದನೆಯ ಶತಮಾನದ ಆದಿಯಲ್ಲಿ ಮೊದಲ ಬೈಕ್ ಖರೀದಿಸಿದ್ದೆ. ನೂರು ರುಪಾಯಿಯಲ್ಲಿ ಮೂರೂ ಮುಕ್ಕಾಲು ಲೀಟರ್ ಪೆಟ್ರೋಲ್ ಹಾಕಿಸಬಹುದಿತ್ತು. ಅಷ್ಟು ಪೆಟ್ರೋಲಿನ್‌ಲ್ಲಿ ಸುಮಾರು ಇನ್ನೂರು ಕಿಲೋ ಮೀಟರ್ ಓಡಾಡಬಹುದಿತ್ತು. ಆದರೆ ಅಂದಿಗೆ ನೂರು ರುಪಾಯಿಯೇ ಅತಿ ದೊಡ್ಡ ದುಡ್ಡು. ರಿಸರ್ವ್‌ಗಿಂತ ಕೊಂಚ ಮೇಲಿದ್ದರೆ ಸಾಕು ಎಂಬಂತೆ ಐವತ್ತು ರುಪಾಯಿಗೆ ಪೆಟ್ರೋಲ್ ಹಾಕಿಸಿ ಹಣ ಉಳಿಸುತ್ತಿದ್ದೆವು. ಪೆಟ್ರೋಲ್ ಉಳಿಸಲು ಇನ್ನಿಲ್ಲದ ಪ್ರಯತ್ನ ಮಾಡುತ್ತಿದ್ದೆವು.

ಆದರೆ ಜೀವನ ಶೈಲಿ ಬದಲಾಗುತ್ತಾ ಹೋದಂತೆ ಮಿತವ್ಯಯ ಎಂಬುದು ಅರ್ಥ ಕಳೆದುಕೊಂಡಿತು. ದುಡಿಯೋದೇ ಖರ್ಚು ಮಾಡೋಕೆ ಎಂಬ ಮನಸ್ಥಿತಿ ರೂಪುಗೊಂಡಿತು. ನಮ್ಮ ದುಡ್ಡು ನಮ್ಮಿಷ್ಟ ಎಂಬ ಉಡಾಫೆ ಮೈಗೂಡಿತು. ಇಂದು ಪ್ರಧಾನಿ ಮೋದಿಯೇ ಹೇಳಿದರೂ ನಾವು ಕಡಿಮೆ ಖರ್ಚು ಮಾಡಲು ಸಿದ್ಧರಿಲ್ಲ. ನಮಗೆ ಹೇಳಲು ನೀವ್ಯಾರು ಎಂದು ಪ್ರಶ್ನಿಸುತ್ತಿದ್ದೇವೆ.

ದೇಶದ ಆರ್ಥಿಕತೆ ಎಂಬುದು ನಾವು ದುಡಿಯುವ ಹಣದ ಮೇಲೆ ಮಾತ್ರವೇ ಅಲ್ಲ, ನಾವು ಮಾಡುವ ಖರ್ಚಿನ ಮೇಲೆಯೂ ಅವಲಂಬಿಸಿದೆ ಎಂಬುದು ನಮಗೆ ಅರ್ಥವಾಗುತ್ತಿಲ್ಲ. ಬೆಲೆ ಏರಿಕೆಯನ್ನು ಖಂಡಿಸುತ್ತಲೇ ನಮ್ಮ ದುಂದುವೆಚ್ಚವನ್ನೂ ಹೆಚ್ಚಿಸುತ್ತಿದ್ದೇವೆ. ನಾವು ಬದಲಾಗುವುದಿಲ್ಲ. ಆದರೆ ದೇಶ ಬದಲಾಗಬೇಕು.

ನಾವು ಯಾವ ರೀತಿಯಲ್ಲೂ ದೇಶದ ಉದ್ಧಾರಕ್ಕಾಗಿ ಕೈಜೋಡಿಸುವುದಿಲ್ಲ. ಆದರೆ ದೇಶ ಉದ್ಧಾರವಾಗಬೇಕು. ಇದು ನಮ್ಮ ಧೋರಣೆಯಾಗಿದೆ. ಏಪ್ರಿಲ್ ಮೊದಲ ವಾರದಲ್ಲಿ ಶ್ರೀಲಂಕಾಗೆ ಹೋಗಿದ್ದೆ. ಜಗತ್ತು ಆ ಸಮಯಕ್ಕಾಗಲೇ ಮಧ್ಯಪ್ರಾಚ್ಯ ಯುದ್ಧದ ಪರಿಣಾಮವನ್ನು ಕಾಣಲಾರಂಭಿಸಿತ್ತು. ನಾವು ಶ್ರೀಲಂಕಾವನ್ನು ಸುತ್ತಲು ಬಾಡಿಗೆ ಕಾರ್ ಬಳಸಲು ನಿರ್ಧರಿಸಿದ್ದೆವು. ಆಗ ಅಲ್ಲಿನ ಪೆಟ್ರೋಲ್ ದರ ಮತ್ತು ನಿರ್ಬಂಧಗಳ ಬಗ್ಗೆ ತಿಳಿದು ಅಚ್ಚರಿಯಾಯಿತು.

ಇರಾನ್-ಇಸ್ರೇಲ್-ಅಮೆರಿಕ ಯುದ್ಧ ಶುರುವಾಗಿ ತೈಲಬಿಕ್ಕಟ್ಟು ಶುರುವಾಗುತ್ತಿದ್ದಂತೆಯೇ ಶ್ರೀಲಂಕಾ ಪೆಟ್ರೋಲ್ ಮಿತವ್ಯಯಕ್ಕೆ ಮುಂದಾಗಿಬಿಟ್ಟಿತು. ಸರಿ-ಬೆಸ (ಈವನ್-ಆಡ್) ನಿಯಮ ಜಾರಿಗೆ ತರಲಾಗಿತ್ತು. ಅಂದರೆ ವಾಹನಗಳ ನೋಂದಣಿ ಸಂಖ್ಯೆ ಈವನ್ ಇದ್ದವರು ಮಾತ್ರ ಪೆಟ್ರೋಲ್ ಕೊಳ್ಳಲು ಒಂದು ದಿನ, ಆಡ್ ಇದ್ದವರು ಕೊಳ್ಳಲು ಒಂದು ದಿನ ಎಂದು ನಿಗದಿಪಡಿಸಲಾಗಿತ್ತು. ಅದರ ಜತೆಗೆ ಕ್ಯೂ ಆರ್ ಕೋಡ್ ಸಿಸ್ಟಮ್ ಜಾರಿಗೆ ತರಲಾಗಿ, ಪ್ರತಿ ಕ್ಯೂ ಆರ್ ಕೋಡ್‌ಗೆ ವಾರಕ್ಕೆ ಇಪ್ಪತ್ತು ಲೀಟರ್ ಪೆಟ್ರೋಲ್ ಮಾತ್ರ ಎಂಬ ನಿರ್ಬಂಧ ಹಾಕಲಾಯಿತು.

ಶ್ರೀಲಂಕಾದ ಯಾವ ನಾಗರಿಕರಿಗೂ ಅದಕ್ಕಿಂತ ಹೆಚ್ಚಿನ ಪೆಟ್ರೋಲ್ ಕೊಡುವುದಿಲ್ಲ. ಕಾಳಸಂತೆ ಯಲ್ಲಿ ಮಾರಲು ಸ್ಟೋರೇಜ್ ಕೂಡ ಮಾಡುವಂತಿಲ್ಲ. ಅದಕ್ಕೆ ಅವಕಾಶವೇ ಇಲ್ಲ. ಎಮರ್ಜೆನ್ಸಿ ಸರ್ವಿಸ್‌ಗಳ ಹೊರತಾಗಿ ಬೇರೆ ಯಾರಿಗೂ ಈ ರಿಯಾಯಿತಿ ಇಲ್ಲವೇ ಇಲ್ಲ. ಪ್ರವಾಸೋದ್ಯಮ ಶ್ರೀಲಂಕಾದ ಪ್ರಮುಖ ಆರ್ಥಿಕತೆಯ ಮಾರ್ಗವಾಗಿರುವುದರಿಂದ ಪ್ರವಾಸಿಗರಿಗೆ ಈ ನಿಯಮಾವಳಿ ಅನ್ವಯವಾಗುವುದಿಲ್ಲ. ಇದರಿಂದಾಗಿ ಪೆಟ್ರೋಲ್ ಬಳಕೆಗೆ ಕಡಿವಾಣ ಬಿದ್ದಂತಾಯಿತು. ಇದರ ಹೊರತಾಗಿ ಶ್ರೀಲಂಕಾ ಸರಕಾರ ಯಾವುದೇ ಹಿಂಜರಿಕೆ ಇಲ್ಲದೆ ಪೆಟ್ರೋಲ್ ಬೆಲೆಯನ್ನು ಏರಿಸಿ ಬಿಟ್ಟಿತು.

ಮಾರ್ಚ್ ಹೊತ್ತಿಗೆ ಲೀಟರ್‌ಗೆ 293 ರುಪಾಯಿ ಇದ್ದ ಪೆಟ್ರೋಲ್ ದರ, ಮಾರ್ಚ್ 10ಕ್ಕೆ 317ಕ್ಕೇರಿತು. ಮತ್ತೆ ಹದಿನೈದು ದಿನದಲ್ಲಿ 398ಕ್ಕೆ ಏರಿತು. ಪ್ರಸ್ತುತ ಶ್ರೀಲಂಕಾದಲ್ಲಿ ಪೆಟ್ರೋಲ್ ದರ 417 ಶ್ರೀಲಂಕನ್ ರುಪೀ ಆಗಿದೆ. ಎರಡು ತಿಂಗಳಲ್ಲಿ ಏರಿದ್ದು ಸುಮಾರು 117 ಶ್ರೀಲಂಕನ್ ರುಪೀ. ಭಾರತದ ರುಪಾಯಿ ಲೆಕ್ಕದಲ್ಲಿ ನೋಡಿದರೆ ಸುಮಾರು 35 ರುಪಾಯಿಗಳಷ್ಟು ಏರಿಕೆ.

ಆದರೆ ಶ್ರೀಲಂಕಾದ ಪ್ರಜೆಗಳು ಇದಕ್ಕೆ ಪ್ರತಿಕ್ರಿಯಿಸುತ್ತಿರುವ ರೀತಿ ನಿಜಕ್ಕೂ ಅನುಕರಣೀಯ. ಪೆಟ್ರೋಲ್ ಬಳಕೆಯ ಕಡಿವಾಣಕ್ಕೆ ವಿರೋಧವಿಲ್ಲ. ಬೆಲೆ ಏರಿಕೆಯ ವಿರುದ್ಧ ಧರಣಿ ಪ್ರತಿಭಟನೆಗಳಿಲ್ಲ. ಯುದ್ಧದಿಂದಾಗಿ ಪರಿಸ್ಥಿತಿ ಹದಗೆಟ್ಟಿದೆ. ಈ ಸಮಯದಲ್ಲಿ ಸರಕಾರದ ನಿರ್ಧಾರಗಳನ್ನು ಗೌರವಿಸಬೇಕು.

ಒಪ್ಪಿಕೊಳ್ಳಬೇಕು ಎಂದು ಅಲ್ಲಿನ ನಾಗರಿಕರು ಹೇಳುತ್ತಿದ್ದರೆ, ನಮ್ಮ ದೇಶದ ನಾಗರಿಕರೊಂದಿಗೆ ಹೋಲಿಸಿ ನೋಡಿಕೊಂಡು ನಾಚಿಕೆಯಾಗುತ್ತದೆ. ಶ್ರೀಲಂಕಾ ಆರ್ಥಿಕ ದಿವಾಳಿ ಕಂಡಂಥ ರಾಷ್ಟ್ರ, ಯಾವ ರೀತಿಯಲ್ಲೂ ಭಾರತದೊಂದಿಗೆ ಸ್ಪರ್ಧಿಗಿಳಿಯುವ ಅರ್ಹತೆ ಇಲ್ಲದಂಥ ದೇಶ. ಆದರೆ ಅವರ ನಾಗರಿಕ ಪ್ರ ನಿಜಕ್ಕೂ ಮಾದರಿ ಅನಿಸಿಬಿಟ್ಟಿತು. ಅಲ್ಲಿನ ವಿರೋಧಪಕ್ಷವೂ ಸೇರಿದಂತೆ, ಸೈದ್ಧಾಂತಿಕ-ರಾಜಕೀಯ ವಿರೋಧಿಗಳೂ ಸರಕಾರದ ನಿರ್ಧಾರಗಳನ್ನು ಗೌರವಿಸಿ ಪಾಲಿಸುತ್ತಿದ್ದುದು ನಿಜಕ್ಕೂ ಅನುಕರಣೀಯ.

ಆದರೆ ಭಾರತ ಪೆಟ್ರೋಲ್ ಬೆಲೆ ಏರಿಕೆಯನ್ನು ನೋಡುತ್ತಿರುವುದು ಹೇಗೆ? ಪಂಚರಾಜ್ಯ ಚುನಾವಣೆ ಆಗೋದನ್ನೇ ಮೋದಿ ಕಾಯುತ್ತಿದ್ದರು. ಚುನಾವಣೆ ಗೆಲ್ತಾ ಇದ್ದ ಹಾಗೇ ಪೆಟ್ರೋಲ್ ಬೆಲೆ ಏರಿಸಿ ಬಿಟ್ಟರು ಅಂತ. ಈ ಸಮಯದಲ್ಲಿ ನಾವು ಒಮ್ಮೆ ಜಗತ್ತಿನಾದ್ಯಂತ ಹೇಗೆ ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆಯಾಗಿದೆ ಎಂಬುದನ್ನು ಗಮನಿಸಬೇಕು.

ನೆನಪಿರಲಿ... ಭಾರತ ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಮತ್ತು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ. ನಮ್ಮ ಕೈಗಾರಿಕೆಗಳು, ಸಾರಿಗೆ ಮತ್ತು ಇಡೀ ಆರ್ಥಿಕ ಚಕ್ರ ತಿರುಗೋದಕ್ಕೆ ಇಂಧನ ಅತಿ ಮುಖ್ಯ. ನಮ್ಮಲ್ಲಿ ಎಲ್ಲವೂ ಇದೆ. ಆದರೆ ಕಚ್ಚಾ ತೈಲಕ್ಕೆ ಮಾತ್ರ ನಾವು ಜಾಗತಿಕ ಮಾರುಕಟ್ಟೆಯನ್ನೇ ಅವಲಂಬಿಸಿದ್ದೇವೆ. ಅದರಲ್ಲೂ ದೊಡ್ಡ ಪಾಲು ಮಧ್ಯಪ್ರಾಚ್ಯದಿಂದಲೇ ಬರುತ್ತದೆ.

ಇತ್ತೀಚಿನ ದಿನಗಳಲ್ಲಿ ರಷ್ಯಾದಿಂದ ಹೆಚ್ಚು ಆಮದು ಮಾಡಿಕೊಳ್ತಾ ಇದ್ದರೂ, ಮಧ್ಯಪ್ರಾಚ್ಯದ ಜಿಯೋ-ಪೊಲಿಟಿಕ್ ಜಾಗತಿಕ ತೈಲ ದರವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸೋದು ವಾಸ್ತವ. ಯುದ್ಧಕ್ಕೆ ಮುನ್ನ ಪ್ರತಿ ಬ್ಯಾರೆಲ್‌ಗೆ 75 ಡಾಲರ್ ಇದ್ದ ಕಚ್ಚಾತೈಲದ ಬೆಲೆ ದಿಢೀರನೆ 95 ಡಾಲರ್ ದಾಟಿ ಹೋದಾಗ ಭಾರತೀಯ ತೈಲ ಮಾರ್ಕೆಟಿಂಗ್ ಕಂಪನಿಗಳು ಅದೇ ಬೆಲೆಗೆ ಖರೀದಿಸ ಬೇಕಾಗುತ್ತದೆ.


ಇದರ ಜತೆಗೆ ಸಾಗಣೆ ವೆಚ್ಚ, ಇನ್ಶೂರೆ ಕೂಡ ಹೆಚ್ಚಾಗಿರೋದನ್ನು ಗಮನಿಸಬೇಕು. ಹೊರ್ಮುಜ್ ಜಲಸಂಧಿಯ ಬಿಕ್ಕಟ್ಟಿನಿಂದಾಗಿ ಸರಕುಗಳು ಸುತ್ತಿಕೊಂಡು ಬರುವ ಅನಿವಾರ್ಯತೆ. ಹದಿನೈದು ದಿನಗಳಲ್ಲಿ ತಲುಪುತ್ತಿದ್ದ ತೈಲ ಈಗ ದುಪ್ಪಟ್ಟು ಸಮಯ ತೆಗೆದುಕೊಳ್ಳುವಂತಾಗಿದೆ. ರಿಸ್ಕ್ ಫ್ಯಾಕ್ಟರ್ ಹೆಚ್ಚಾಗಿರುವುದರಿಂದ ಇನ್ಶೂರೆ ಪ್ರೀಮಿಯಂ ಕೂಡ ದುಬಾರಿಯಾಗಿದೆ.

ಇತ್ತ ಡಾಲರ್ ಎದುರು ರುಪಾಯಿಯ ಬೆಲೆ ಕೂಡ ಕುಸಿತ ಕಂಡಿದೆ. ಜಾಗತಿಕ ಅಸ್ಥಿರತೆ ಯುಂಟಾದಾಗ ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾಗಿ ಅಮೆರಿಕನ್ ಡಾಲರ್ ಕಡೆಗೆ ಮುಖ ಮಾಡುವುದರಿಂದ ರುಪಾಯಿ ಮೌಲ್ಯ ಕುಸಿಯುವುದು ಸಹಜವೇ. ಭಾರತವು ತೈಲ ಖರೀದಿಯನ್ನು ಡಾಲರ್‌ನ ಮಾಡಬೇಕಿರುವುದರಿಂದ, ರುಪಾಯಿ ದುರ್ಬಲಗೊಂಡಾಗ ನಾವು ಅದೇ ಪ್ರಮಾಣದ ತೈಲಕ್ಕೆ ಹೆಚ್ಚಿನ ಹಣ ಪಾವತಿಸಬೇಕಾಗುತ್ತದೆ.


ಬ್ಯಾರೆಲ್‌ಗೆ ಎಪ್ಪತ್ತೈದು ಡಾಲರ್ ಇದ್ದದ್ದು 130 ಡಾಲರ್‌ಗೆ ಏರಿದರೂ ನಾವು ಅದೇ ಬೆಲೆಗೆ ಪೆಟ್ರೋಲ್ ಕೊಡಬೇಕು ಅಂದರೆ ಹೇಗೆ ಸಾಧ್ಯ? ಜಾಗತಿಕವಾಗಿ ಬೆಲೆ ಏರಿದರೆ ಸರ್ಕಾರವೇ ಸಬ್ಸಿಡಿ ನೀಡಿ ಬೆಲೆ ಕಡಿಮೆ ಇಡಬಹುದಲ್ಲವೇ? ಎಂಬುದು ಸಾಮಾನ್ಯರ ತರ್ಕ. ಆದರೆ, ಆರ್ಥಿಕ ತಜ್ಞರ ದೃಷ್ಟಿಕೋನದಲ್ಲಿ ಇದು ದೇಶದ ಆರ್ಥಿಕತೆಯ ಆತ್ಮಹತ್ಯೆಗೆ ಸಮಾನ.

ಸರ್ಕಾರ ತೈಲದ ಮೇಲಿನ ಸಬ್ಸಿಡಿ ಯನ್ನು ಹೆಚ್ಚಿಸಿ, ತೆರಿಗೆ ಕಡಿಮೆ ಮಾಡಿ ಎರಡೂವರೆ ತಿಂಗಳು ಭಾರ ಹೊತ್ತು ಕೊಂಡಿತು. ಆದರೆ, ಅದನ್ನು ದೀರ್ಘ ಕಾಲ ಮುಂದುವರಿಸು ವುದು ಸಾಧ್ಯವಾ? ಹಾಗೆ ಮಾಡಿದರೆ ಅದು ಬಜೆಟ್ ಮೇಲೆ ಏಟು ಕೊಡುತ್ತದೆ. ಇಂಧನಕ್ಕೆ ಕೊಟ್ಟ ಕೋಟ್ಯಂತರ ರುಪಾಯಿ ಸಬ್ಸಿಡಿ ಸರಿದೂಗಿಸೋಕೆ ದೇಶದ ಮೂಲಸೌಕರ್ಯ ಅಭಿವೃದ್ಧಿ (ರಸ್ತೆಗಳು, ರೈಲ್ವೆ, ಹೆರಿಗಳು), ಶಿಕ್ಷಣ, ಆರೋಗ್ಯ ಮತ್ತು ರಕ್ಷಣಾ ವಲಯ ಇವೆಲ್ಲವನ್ನು ಬಲಿಕೊಡಬೇಕಾಗುತ್ತೆ.

ಭಾರತದ ತೈಲ ಮಾರಾಟ ಕಂಪನಿಗಳು ಸಾರ್ವಜನಿಕ ವಲಯದ ಸಂಸ್ಥೆಗಳಾಗಿವೆ. ಜಾಗತಿಕವಾಗಿ ಬೆಲೆ ಏರಿದಾಗಲೂ ದೇಶೀಯವಾಗಿ ಬೆಲೆ ಹೆಚ್ಚಿಸದಿದ್ದರೆ, ಈ ಕಂಪನಿಗಳು ಬಿಲಿಯನ್‌ಗಟ್ಟಲೆ ನಷ್ಟ ಅನುಭವಿಸುತ್ತವೆ. ಈ ಕಂಪನಿಗಳು ನಷ್ಟದಲ್ಲಿದ್ದರೆ, ಹೊಸ ತೈಲ ಪರಿಶೋಧನೆ, ಸಂಸ್ಕರಣಾಗಾರಗಳ ಆಧುನೀಕರಣ ಮತ್ತು ಭವಿಷ್ಯದ ಇಂಧನ ಭದ್ರತೆಗೆ ಹೂಡಿಕೆ ಮಾಡಲು ಸಾಧ್ಯವಾಗುವುದಿಲ್ಲ.



2008-2012ರ ಅವಧಿಯಲ್ಲಿ ತೈಲ ಬಾಂಡ್‌ಗಳ ಮೂಲಕ ಸಬ್ಸಿಡಿ ನೀಡಿದ ಪರಿಣಾಮವನ್ನು ದೇಶ ಇಂದಿಗೂ ಅನುಭವಿಸುತ್ತಿದೆ. ಒಂದು ಸಲ ಜಗತ್ತಿನಲ್ಲಿ ಮಾರ್ಚ್‌ನಿಂದ ಈಚೆಗೆ ಆಗಿರುವ ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆಯ ಕಡೆ ಕಣ್ಣಾಯಿಸಿ ನೋಡಿ. ಮಲೇಷಿಯಾದಲ್ಲಿ



ಪೆಟ್ರೋಲ್ 50%, ಡೀಸೆಲ್ 70% ಏರಿಕೆಯಾಗಿದೆ.

ಪಾಕಿಸ್ತಾನದಲ್ಲಿ 50%, ಅಮೆರಿಕದಲ್ಲಿ ಪೆಟ್ರೋಲ್ 45%, ಡೀಸೆಲ್ 48%, ದಕ್ಷಿಣ ಆಫ್ರಿಕಾದಲ್ಲಿ 30%, ಕೆನಡಾದಲ್ಲಿ 30%, ಬ್ರಿಟನ್ ಮತ್ತು ದಕ್ಷಿಣ ಕೊರಿಯಾಗಳಲ್ಲಿ ಸುಮಾರು 19%, ಜರ್ಮನಿ ಮತ್ತು ಜಪಾನ್‌ಗಳಲ್ಲಿ 10ರಿಂದ 15% ಏರಿಕೆ ದಾಖಲಾಗಿದೆ.

ಬಹಳ ಅಚ್ಚರಿ ಅಂದರೆ, ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಡೀಸೆಲ್ ಬೆಲೆ 85% ವರೆಗೆ ಏರಿಕೆಯಾಗಿದೆ. ಹೀಗಿದ್ದೂ ಭಾರತ ಸರಕಾರ ಮೂರು ತಿಂಗಳುಗಳ ಕಾಲ ಬೆಲೆ ಏರಿಸದೆಯೇ, ಎಲ್ಲ ಭಾರವನ್ನು ತನ್ನ ಮೇಲೆ ಹಾಕಿಕೊಂಡು ನಿಭಾಯಿಸಿತು. ಇನ್ನು ಸಾಧ್ಯವೇ ಇಲ್ಲವೆಂದಾಗ ತಾತ್ಕಾಲಿಕ ಏರಿಕೆ ಎಂಬಂತೆ ಕೇವಲ 2.5%ನಷ್ಟು ಏರಿಕೆ ಮಾಡಿತು.

ಇತರ ರಾಷ್ಟ್ರಗಳಂತೆ, ಪೆಟ್ರೋಲ್ ಬಳಕೆಯ ಮೇಲೆ ನಿರ್ಬಂಧ ಹೇರಿಲ್ಲ, ಮಿತಿ ಹಾಕಿಲ್ಲ. ಮಿತವ್ಯಯ ಮಾಡಿ, ಸಾರ್ವಜನಿಕ ಸಾರಿಗೆ ಬಳಸಿ, ಇವಿ ವಾಹನಗಳತ್ತ ಒಲವು ತೋರಿ ಎಂಬ ಮನವಿ ಅಥವಾ ಹಿತನುಡಿಗಳನ್ನು ಕೊಡಮಾಡಿತಷ್ಟೆ. ಆದರೆ ನಾವು ಪ್ರತಿಕ್ರಿಯಿಸುತ್ತಿರುವುದು ಮಾತ್ರ ರಾಜಕೀಯದ ಕಣ್ಣಿಂದ.

ಕೋವಿಡ್ ಎಂಬ ಜಾಗತಿಕ ಸಂಕಷ್ಟವೇ ಭಾರತೀಯರ ರಾಜಕೀಯ ಮನಸ್ಥಿತಿಯನ್ನು ಬದಲಿಸಲಿಲ್ಲ. ಇನ್ನು ಪರದೇಶದಲ್ಲಿ ನಡೆಯುತ್ತಿರುವ ಯುದ್ಧ ಬದಲಾಯಿಸೀತೇ? ಭ್ರಮೆಯಷ್ಟೆ. ನಾವು ಸರಕಾರ ಹೇಳಿದೆ ಎಂಬ ಕಾರಣಕ್ಕೆ ಮಾತು ಕೇಳಬೇಕಿಲ್ಲ. ಕನಿಷ್ಠ ಸ್ವಂತ ವಿವೇಚನೆ ಇದ್ದರೂ ನಾವು ಮಿತವ್ಯಯಕ್ಕೆ ಮುಂದಾಗಿ, ಹೊಸ ಆವಿಷ್ಕಾರಗಳಿಗೆ ಬೆಲೆ ಕೊಡುವ ಮೂಲಕ ಸರಕಾರದ ಭಾವನೆಗಳಿಗೆ ಸ್ಪಂದಿಸುತ್ತಿದ್ದೆವು.

ಪೆಟ್ರೋಲ್ ಡೀಸೆಲ್ ಏರಿಕೆಯನ್ನು ವಿರೋಧಿಸುತ್ತಾ ನಾವು ಎಂದಿನಂತೆ ದುಂದುವೆಚ್ಚ ಮಾಡುತ್ತೇವೆ ಎಂಬುದು ನಮ್ಮ ಮನಸ್ಥಿತಿಯಾದರೆ, ಮುಂದಿನ ಭೀಕರ ಆರ್ಥಿಕ ಪರಿಣಾಮಗಳಿಗೆ ನಾವು ಹೊಣೆಯಾಗಬೇಕಾಗುತ್ತದೆ. ಪೆಟ್ರೋಲ್ ಡೀಸೆಲ್‌ಗಳ ಬೆಲೆ ಏರಿಕೆ ನೇರವಾಗಿ ದಿನನಿತ್ಯದ ಎಲ್ಲ ವಸ್ತುಗಳು, ಜೀವನಶೈಲಿಗಳು ದುಬಾರಿಯಾಗಲು ಕಾರಣವಾಗುತ್ತದೆ. ಅರ್ಥ ಮಾಡಿಕೊಳ್ಳದಿದ್ದರೆ ಅನುಭವಿಸಬೇಕಾಗುತ್ತದೆ.

**- ನವೀನ್ ಸಾಗರ್**



---

# ಸಿಂಧೂ ಜಲ ಒಪ್ಪಂದ: ಅನ್ಯಾಯ ಯಾರಿಗೆ?

**» ಆರಂಭದ ಭಾರತವು ತಾಳಿದ ಸಮಂಜಸ ಮತ್ತು ರಚನಾತ್ಮಕ ನಿಲುವು ಹಾಗೂ ಪಾಕಿಸ್ತಾನದ ಗರಿಷ್ಠವಾದ, ಕೆಲವೊಮ್ಮೆ ಅಸಂಗತವಾದ ಬೇಡಿಕೆಗಳ ನಡುವಿನ ಅಸಮಾನತೆಯಿಂದ ಮಾತುಕತೆಗಳ ದಿಕ್ಕು ರೂಪುಗೊಂಡಿತು. ಈ ಅಸಮಾನತೆಯೇ ಫಲಿತಾಂಶಗಳನ್ನು ನ್ಯಾಯಸಮ್ಮತವಾಗಿಡುವ ಬದಲು ಪಾಕಿಸ್ತಾನದ ಪರವಾಗಿ ತಳ್ಳಿತು. 5 ಫೆಬ್ರವರಿ 1954ರ ವಿಶ್ವ ಬ್ಯಾಂಕ್‌ನ ಮೊದಲ ಗಣನೀಯ ಪ್ರಸ್ತಾವನೆಯು ಇದನ್ನು ಸ್ಪಷ್ಟವಾಗಿ ವಿವರಿಸುತ್ತದೆ. ಈ ಆರಂಭಿಕ ಹಂತದಲ್ಲಿಯೂ, ಇದಕ್ಕೆ ಭಾರತದಿಂದ ಗಮನಾರ್ಹ ಏಕಪಕ್ಷೀಯ ರಿಯಾಯಿತಿಗಳು ಬೇಕಾಗಿದ್ದವು.**

ನೀರನೋಟ

ಸಿಂಧೂ ನದಿ ವ್ಯವಸ್ಥೆಯು ಆರು ಪ್ರಮುಖ ನದಿಗಳನ್ನು ಒಳಗೊಂಡಿದೆ-ಸಿಂಧೂ (ಇಂಡಸ್), ಚೆನಾಬ್, ಝೇಲಂ, ರಾವಿ, ಬೀಸ್ ಮತ್ತು ಸಟ್ಲೆಜ್- ಈ ನದಿಗಳು ಭಾರತ ಮತ್ತು ಪಾಕಿಸ್ತಾನ ಎರಡೂ ಪ್ರದೇಶಗಳಲ್ಲಿ ಹರಿಯುತ್ತಿವೆ. ಈ ವ್ಯವಸ್ಥೆ ಸಿಂಧೂ ಕಣಿವೆಯಾದ್ಯಂತ ಕುಡಿಯುವ ನೀರು, ಕೃಷಿ ಮತ್ತು ವಿದ್ಯುತ್ ಉತ್ಪಾದನೆಯನ್ನು ಪೋಷಿಸುತ್ತದೆ. ಮತ್ತು ಗಡಿಗಳ ಎರಡೂ ಬದಿಗಳಲ್ಲಿ ಕೋಟ್ಯಂತರ ಜನರಿಗೆ ಜೀವನಾಧಾರವಾಗಿದೆ.

1947ರಲ್ಲಿ ಬ್ರಿಟಿಷ್ ಭಾರತವನ್ನು ವಿಭಜಿಸಿದಾಗ, ಸಿಂಧು ನದಿ ವ್ಯವಸ್ಥೆಯನ್ನೂ ಎರಡು ಉತ್ತರಾಧಿಕಾರಿ ದೇಶಗಳ ನಡುವೆ ವಿಂಗಡಿಸಲಾಯಿತು. ಭೌಗೋಳಿಕ ವಾಸ್ತವವು ಸ್ಪಷ್ಟವಾಗಿತ್ತು. ಮೇಲ್ದಂಡೆಯ ರಾಷ್ಟ್ರವಾಗಿರುವ ಭಾರತವು ಹೆಚ್ಚಿನ ನದಿಗಳ ಮೂಲ ಪ್ರದೇಶಗಳನ್ನು ಹೊಂದಿತ್ತು, ಆದರೆ ಪಾಕಿಸ್ತಾನದ ಕೃಷಿ ಹೃದಯಭೂಮಿ- ಹೆಚ್ಚು ನೀರಾವರಿ ಹೊಂದಿರುವ ಪಂಜಾಬ್ ಸಮತಟ್ಟುಗಳು- ಪೂರ್ವದಿಂದ ನಿರಂತರ ಹರಿದು ಬರುವ ನೀರಿನ ಮೇಲೆ ನಿರ್ಣಾಯಕವಾಗಿ ಅವಲಂಬಿತವಾಗಿದ್ದವು.

ಭಾರತವು, ತನ್ನ ಹೊಸ ಪಶ್ಚಿಮ ನೆರೆಹೊರೆಯೊಂದಿಗೆ ಸ್ಥಿರತೆ ಮತ್ತು ಸಾಮಾನ್ಯ ಸಂಬಂಧಗಳನ್ನು ಬಯಸುವ ಜೊತೆಗೆ, ಪಂಜಾಬ್ ಮತ್ತು ರಾಜಸ್ಥಾನದಲ್ಲಿ ಸ್ವಂತ ಅಭಿವೃದ್ಧಿ ಉದ್ದೇಶಗಳಿಗಾಗಿ ಈ ವ್ಯವಸ್ಥೆಯನ್ನು ಬಳಸಿಕೊಳ್ಳುವ ಅವಶ್ಯಕತೆ ಇತ್ತು. ತನ್ನದೇ ಆದ ಪ್ರಮುಖ ದೇಶೀಯ ಅಗತ್ಯಗಳ ಹೊರತಾಗಿಯೂ, ಭಾರತವು 1960 ಸೆಪ್ಟೆಂಬರ್ 19ರಂದು ಪಾಕಿಸ್ತಾನದೊಂದಿಗೆ ಈ ಅತ್ಯಂತ ರಿಯಾಯಿತಿಪೂರ್ಣ ನೀರು ಹಂಚಿಕೆ ಒಪ್ಪಂದವನ್ನು ಮಾಡಿಕೊಂಡಿತು, ಈ ಒಪ್ಪಂದವನ್ನು ವಿಶ್ವ ಬ್ಯಾಂಕ್ ಸಹಾಯದಿಂದ ಸಾಧಿಸಲಾಯಿತು.

### ಭಾರತ ಬೆಲೆ ತೆರಬೇಕಾಯಿತು

ಆರಂಭದ ಭಾರತವು ತಾಳಿದ ಸಮಂಜಸ ಮತ್ತು ರಚನಾತ್ಮಕ ನಿಲುವು ಹಾಗೂ ಪಾಕಿಸ್ತಾನದ ಗರಿಷ್ಠವಾದ, ಕೆಲವೊಮ್ಮೆ ಅಸಂಗತವಾದ ಬೇಡಿಕೆಗಳ ನಡುವಿನ ಅಸಮಾನತೆಯಿಂದ ಮಾತುಕತೆಗಳ ದಿಕ್ಕು ರೂಪುಗೊಂಡಿತು. ಈ ಅಸಮಾನತೆಯೇ ಫಲಿತಾಂಶಗಳನ್ನು ನ್ಯಾಯಸಮ್ಮತವಾಗಿಡುವ ಬದಲು ಪಾಕಿಸ್ತಾನದ ಪರವಾಗಿ ತಳ್ಳಿತು. 5 ಫೆಬ್ರವರಿ 1954ರ ವಿಶ್ವ ಬ್ಯಾಂಕ್‌ನ ಮೊದಲ ಗಣನೀಯ ಪ್ರಸ್ತಾವನೆಯು ಇದನ್ನು ಸ್ಪಷ್ಟವಾಗಿ ವಿವರಿಸುತ್ತದೆ. ಈ ಆರಂಭಿಕ ಹಂತದಲ್ಲಿಯೂ, ಇದಕ್ಕೆ ಭಾರತದಿಂದ ಗಮನಾರ್ಹ ಏಕಪಕ್ಷೀಯ ರಿಯಾಯಿತಿಗಳು ಬೇಕಾಗಿದ್ದವು.

ಸಿಂಧೂ ಮತ್ತು ಚೆನಾಬ್ ನದಿಗಳ ಮೇಲ್ಭಾಗದಲ್ಲಿ ಕೈಗೊಳ್ಳಲಾಗುತ್ತಿದ್ದ ಎಲ್ಲಾ ಯೋಜಿತ ಭಾರತೀಯ ಅಭಿವೃದ್ಧಿ ಕಾರ್ಯಗಳನ್ನು ಕೈಬಿಡಬೇಕಾಯಿತು, ಬದಲಿಗೆ ಆ ಪ್ರಯೋಜನಗಳು ಪಾಕಿಸ್ತಾನಕ್ಕೆ ಸೇರಬೇಕಾಯಿತು. ಭಾರತವು ಚೆನಾಬ್ ನದಿಯಿಂದ ಸುಮಾರು 6 ಅನ್ನು ತಿರುಗಿಸುವುದನ್ನು ತ್ಯಜಿಸಬೇಕಾಯಿತು.

ಮೇರಲದಲ್ಲಿನ (ಈಗ ಪಾಕಿಸ್ತಾನದಲ್ಲಿದೆ) ಯಾವುದೇ ಚೆನಾಬ್ ನೀರು ಭಾರತೀಯ ಬಳಕೆಗೆ ಲಭ್ಯವಿರುವುದಿಲ್ಲ, ನದಿ ವ್ಯವಸ್ಥೆಯಿಂದ ಕಥ್‌ನಲ್ಲಿ ಯಾವುದೇ ಜಲಾಭಿವೃದ್ಧಿಗೆ ಅನುಮತಿ ನೀಡಲಾಗುವುದಿಲ್ಲ. ಈ ಗಣನೀಯ ನಿರ್ಬಂಧಗಳ ಹೊರತಾಗಿಯೂ, ಭಾರತವು ತಕ್ಷಣವೇ ಉತ್ತಮ ನಂಬಿಕೆಯಲ್ಲಿ ಪ್ರಸ್ತಾಪವನ್ನು ಅಂಗೀಕರಿಸಿತು.

ಇದು ತ್ವರಿತ ಪರಿಹಾರಕ್ಕಾಗಿ ಭಾರತದ ನಿಜವಾದ ಬಯಕೆಯನ್ನು ಸಂಕೇತಿಸುತ್ತದೆ.

ಇದಕ್ಕೆ ತದ್ವಿರುದ್ಧವಾಗಿ, ಪಾಕಿಸ್ತಾನವು 1958 ಡಿಸೆಂಬರ್ 22ರವರೆಗೆ ಸುಮಾರು ಐದು ವರ್ಷಗಳವರೆಗೆ ತನ್ನ ಔಪಚಾರಿಕ ಅಂಗೀಕಾರವನ್ನು ವಿಳಂಬಗೊಳಿಸಿತು. ಭಾರತದ ಈ ಸದ್ಭಾವನೆಯ ನಡೆಯ ಪರಿಣಾಮವಾಗಿ, ಪಾಕಿಸ್ತಾನವು ಪಶ್ಚಿಮ ನದಿಗಳಲ್ಲಿ ಸಮಾನ ನಿರ್ಬಂಧಗಳಿಲ್ಲದೆ ಹೊಸ ಬಳಕೆಗಳನ್ನು ಅಭಿವೃದ್ಧಿಪಡಿಸುವುದನ್ನು ಮುಂದುವರೆಸಿತು. ಆದರೆ ಭಾರತದ ಮೇಲೆ ನಿರ್ಬಂಧಗಳನ್ನು ವಿಧಿಸಲಾಯಿತು.

ಅಡೆತಡೆ ಮಾಡುವುದರಿಂದ ಲಾಭವಾಗುತ್ತದೆ ಮತ್ತು ಸಹಕಾರ ದುಬಾರಿಯಾಗುತ್ತದೆ ಎಂಬ ಪಾಠವನ್ನು ಪಾಕಿಸ್ತಾನ ಕಲಿತುಕೊಂಡಿತು. ಮತ್ತು ಆ ಪಾಠವನ್ನು ನಂತರದಿಂದ ನಿರಂತರವಾಗಿ ಅನುಸರಿಸುತ್ತ ಬಂದಿದೆ.

### ಭಾರತದ ತ್ಯಾಗದ ಪ್ರಮಾಣ

ಒಪ್ಪಂದದ ಹಂಚಿಕೆ ಸೂತ್ರದ ಅಡಿಯಲ್ಲಿ, ಭಾರತವು ಮೂರು ಪೂರ್ವ ನದಿಗಳಿಗೆ ವಿಶೇಷ ಹಕ್ಕುಗಳನ್ನು ಸ್ವೀಕರಿಸಿತು- ಸಟ್ಲೆಜ್, ಬಿಯಾಸ್ ಮತ್ತು ರಾವಿ- ಪಾಕಿಸ್ತಾನವು ಮೂರು ಪಶ್ಚಿಮ ನದಿಗಳಾದ ಸಿಂಧು, ಚೆನಾಬ್ ಮತ್ತು ಝೇಲಂನ ನೀರಿಗೆ ಹಕ್ಕುಗಳನ್ನು ಪಡೆದಿದೆ. ಭಾರತಕ್ಕೆ ತನ್ನದೇ ಪ್ರದೇಶದೊಳಗಿನ ಪಶ್ಚಿಮ ನದಿಗಳ ಮೇಲೆ ಕೆಲವು ಸೀಮಿತ, ಉಪಭೋಗವಲ್ಲದ ಬಳಕೆಗಳಿಗೆ ಅನುಮತಿ ನೀಡಲಾಯಿತು - ಮುಖ್ಯವಾಗಿ ಹರಿಯುವ ನದಿಯಿಂದ ಜಲವಿದ್ಯುತ್ ಉತ್ಪಾದನೆಗಾಗಿ, ಆದರೆ ಇದಕ್ಕೆ ವ್ಯಾಪಕ ವಿನ್ಯಾಸ ಮತ್ತು ಕಾರ್ಯಾಚರಣಾ ನಿರ್ಬಂಧಗಳು ಅನ್ವಯಿಸುತ್ತವೆ.

ಪ್ರಮಾಣದ ಪರಿಭಾಷೆಯಲ್ಲಿ, ಭಾರತಕ್ಕೆ ಹಂಚಿಕೆಯಾದ ಪೂರ್ವ ನದಿಗಳು ವಾರ್ಷಿಕ ಹರಿವಿನ ಸುಮಾರು 33 ಮಿಲಿಯನ್ ಎಕರೆ-ಅಡಿ (ಎಮ್‌ಎಎಫ್) ಅನ್ನು ಹೊಂದಿರುತ್ತವೆ. ಮತ್ತು ಪಾಕಿಸ್ತಾನಕ್ಕೆ ಹಂಚಿಕೆಯಾದ ಪಶ್ಚಿಮ ನದಿಗಳು ಸುಮಾರು 135 ಎಮ್‌ಎಎಫ್ ನೀರನ್ನು ಹೊಂದಿರುತ್ತವೆ. ಇದರಿಂದ ಪಾಕಿಸ್ತಾನಕ್ಕೆ ಒಟ್ಟು ನದಿ ವ್ಯವಸ್ಥೆಯ ಸುಮಾರು 80 ಪ್ರತಿಶತ ಲಭ್ಯವಾಗುತ್ತದೆ.

ಭಾರತವು ವಿಶಾಲವಾದ ಪಶ್ಚಿಮ ನದಿ ವ್ಯವಸ್ಥೆಯ ಮೇಲಿನ ಎಲ್ಲಾ ಹಕ್ಕುಗಳನ್ನು ತ್ಯಜಿಸುವ ಬದಲಾಗಿ 20 ಶೇಕಡಾ ಪಾಲನ್ನು ಪಡೆಯಿತು. ಒಪ್ಪಂದದಿಂದ ಭಾರತವು ಹೊಸ ನೀರನ್ನು ಪಡೆಯಲಿಲ್ಲ ಎಂಬುದು ನಿರ್ಣಾಯಕ ಅಂಶವಾಗಿದೆ.

ಭಾರತಕ್ಕೆ ಲಭಿಸಿದ್ದು, ಅದು ಈಗಾಗಲೇ ಬಳಸುತ್ತಿದ್ದ ನೀರಿನ ಹರಿವಿನ ಮೇಲಿನ ಅಧಿಕೃತ ಮಾನ್ಯತೆ ಮಾತ್ರ. ಅದಕ್ಕಾಗಿ ಬಹಳ ದೊಡ್ಡ ಪಶ್ಚಿಮ ನದಿ ವ್ಯವಸ್ಥೆಯ ಮೇಲಿನ ಎಲಾ ಹಕ್ಕುಗಳನ್ನು ತ್ಯಜಿಸಬೇಕಾಯಿತು. ಭಾರತಕ್ಕೆ ತನ್ನ ಪ್ರದೇಶದೊಳಗಿನ ಪಶ್ಚಿಮ ನದಿಗಳ ಮೇಲೆ ಕೆಲವು ಉಪಭೋಗವಲ್ಲದ ಬಳಕೆಗಳಿಗೆ ಅನುಮತಿ ನೀಡಲಾಯಿತು. ಮುಖ್ಯವಾಗಿ ನದಿಯ ಸಹಜ ಹರಿವನ್ನು ಬಳಸಿ ಜಲವಿದ್ಯುತ್ ಉತ್ಪಾದಿಸಲು ಅನುಮತಿಸಲಾಯಿತು.

### ಹಣಕಾಸಿನ ನಿಬಂಧನೆ

ಒಪ್ಪಂದದ ಅತ್ಯಂತ ಗಮನಾರ್ಹವಾದ ಅಸಂಗತತೆ ಎಂದರೆ ಹಣಕಾಸಿನ ನಿಬಂಧನೆ. ಪಾಕಿಸ್ತಾನ-ಆಕ್ರಮಿತ ಕಾಶ್ಮೀರದಲ್ಲಿ ನೀರಿನ ಸಂಪನ್ಮೂಲಗಳ ಮೂಲಸೌಕರ್ಯವನ್ನು ನಿರ್ಮಿಸಲು ಪಾ ಕಿಸ್ತಾನಕ್ಕೆ ಪರಿಹಾರವಾಗಿ ಸುಮಾರು 62 ಮಿಲಿಯ ಡಾಲರ್ (ಪ್ರಸ್ತುತ ಮೌಲ್ಯದಲ್ಲಿ ಸುಮಾರು 2.5 ಬಿಲಿಯ) ಪಾವತಿಸಲು ಭಾರತ ಒಪ್ಪಿದೆ. ಈ ಪಾವತಿಯು ಒಂದು ವಿಶಿಷ್ಟ ಪೂರ್ವನಿದರ್ಶನವನ್ನು ಪ್ರತಿನಿಧಿಸುತ್ತದೆ. ಇದರಲ್ಲಿ ಈಗಾಗಲೇ ವ್ಯವಸ್ಥೆಯ ಬಹುಪಾಲು ನೀರನ್ನು ಬಿಟ್ಟುಕೊಡುತ್ತಿದ್ದ ಮೇಲ್ದಂಡೆ ದೇಶವು, ಹೆಚ್ಚುವರಿಯಾಗಿ ಸವಲತ್ತು ಪಡೆಯಲು ಕೆಳದಂಡೆಯ ನದಿಯ ದೇಶಕ್ಕೆ ಪಾವತಿಸಿತು.

ಮೂಲಭೂತವಾದ ನೀರಿನ ಹಂಚಿಕೆ ಪ್ರಶ್ನೆಯಲ್ಲಿ ಪಾಕಿಸ್ತಾನದ ಪರವಾಗಿ ಹೆಚ್ಚು ಲಾಭಕರವಾಗಿದ್ದ ಒಪ್ಪಂದವನ್ನು ಅಂಗೀಕರಿಸಲು ಭಾರತವು ವಾಸ್ತವವಾಗಿ ಪಾಕಿಸ್ತಾನಕ್ಕೆ ಸಹಾಯಧನ ನೀಡಿದಂತಾಯಿತು.

### ಒಪ್ಪಂದದ ರಚನಾತ್ಮಕ ಅನ್ಯಾಯ

ಈ ಒಪ್ಪಂದವು ಪಶ್ಚಿಮ ನದಿಗಳ ಬಳಕೆಯಲ್ಲಿ ಭಾರತಕ್ಕೆ ನಿರ್ದಿಷ್ಟ ವಿನ್ಯಾಸ ಮತ್ತು ಕಾರ್ಯಾಚರಣಾ ನಿರ್ಬಂಧಗಳ ಸರಣಿಯನ್ನು ವಿಧಿಸುತ್ತದೆ. ಆದರೆ ಅದಕ್ಕೆ ಸಮಾನವಾದ ಯಾವುದೇ ಬಾಧ್ಯತೆಗಳು ಪಾಕಿಸ್ತಾನಕ್ಕೆ ಇಲ್ಲ.



## ಆ ಪ್ರಯೋಜನಗಳು ಪಾಕಿಸ್ತಾನಕ್ಕೆ ಸೇರಬೇಕಾಯಿತು...

- ಭಾರತವು ಚೆನಾಬ್ ನದಿಯಿಂದ ಸುಮಾರು 6 ಅನ್ನು ತಿರುಗಿಸುವುದನ್ನು ತ್ಯಜಿಸಬೇಕಾಯಿತು.
- ಮೇರಲದಲ್ಲಿನ (ಈಗ ಪಾಕಿಸ್ತಾನದಲ್ಲಿದೆ) ಯಾವುದೇ ಚೆನಾಬ್ ನೀರು ಭಾರತೀಯ ಬಳಕೆಗೆ ಲಭ್ಯವಿರುವುದಿಲ್ಲ.
- ನದಿ ವ್ಯವಸ್ಥೆಯಿಂದ ಕಥ್‌ನಲ್ಲಿ ಯಾವುದೇ ಜಲಾಭಿವೃದ್ಧಿಗೆ ಅನುಮತಿ ನೀಡಲಾಗುವುದಿಲ್ಲ. ಈ ಗಣನೀಯ ನಿರ್ಬಂಧಗಳ ಹೊರತಾಗಿಯೂ, ಭಾರತವು ತಕ್ಷಣವೇ ಉತ್ತಮ ನಂಬಿಕೆಯಲ್ಲಿ ಪ್ರಸ್ತಾಪವನ್ನು ಅಂಗೀಕರಿಸಿತು.
- ಇದು ತ್ವರಿತ ಪರಿಹಾರಕ್ಕಾಗಿ ಭಾರತದ ನಿಜವಾದ ಬಯಕೆಯನ್ನು ಸಂಕೇತಿಸುತ್ತದೆ.
- ಇದಕ್ಕೆ ತದ್ವಿರುದ್ಧವಾಗಿ, ಪಾಕಿಸ್ತಾನವು 1958 ಡಿಸೆಂಬರ್ 22ರವರೆಗೆ ಸುಮಾರು ಐದು ವರ್ಷಗಳವರೆಗೆ ತನ್ನ ಔಪಚಾರಿಕ ಅಂಗೀಕಾರವನ್ನು ವಿಳಂಬಗೊಳಿಸಿತು.
- ಭಾರತದ ಈ ಸದ್ಭಾವನೆಯ ನಡೆಯ ಪರಿಣಾಮವಾಗಿ, ಪಾಕಿಸ್ತಾನವು ಪಶ್ಚಿಮ ನದಿಗಳಲ್ಲಿ ಸಮಾನ ನಿರ್ಬಂಧಗಳಿಲ್ಲದೆ ಹೊಸ ಬಳಕೆಗಳನ್ನು ಅಭಿವೃದ್ಧಿಪಡಿಸುವುದನ್ನು ಮುಂದುವರೆಸಿತು.

ಭಾರತವು ತನ್ನ ಪ್ರದೇಶದಲ್ಲಿ ಸೀಮಿತ ನೀರಾವರಿ ಬೆಳೆ ಪ್ರದೇಶವನ್ನು ಮಾತ್ರ ಅಭಿವೃದ್ಧಿಪಡಿಸಬಹುದು. ಪಶ್ಚಿಮ ನದಿಗಳಲ್ಲಿನ ಯಾವುದೇ ಸಂಗ್ರಹಣಾ ಸೌಲಭ್ಯದಲ್ಲಿ ಹಿಡಿದಿಟ್ಟುಕೊಳ್ಳಬಹುದಾದ ನೀರಿನ ಪ್ರಮಾಣದ ಮೇಲೆ ಭಾರತವು ಕಟ್ಟುನಿಟ್ಟಿನ ಮಿತಿಗಳನ್ನು ಎದುರಿಸುತ್ತಿದೆ.


ಸಂಗ್ರಹಣೆ ಮತ್ತು ಸಂಗ್ರಹ ಸಾಮರ್ಥ್ಯದ ಮೇಲಿನ ನಿರ್ಬಂಧಗಳನ್ನು ಒಳಗೊಂಡಂತೆ ಪಶ್ಚಿಮ ನದಿಗಳನ್ನು ಬಳಸಿ ನಿರ್ಮಿಸುವ ಜಲವಿದ್ಯುತ್ ಸೌಲಭ್ಯಗಳಿಗೆ ಭಾರತವು ನಿರ್ದಿಷ್ಟ ವಿನ್ಯಾಸದ ಮಾನದಂಡಗಳನ್ನು ಅನುಸರಿಸಬೇಕು.ಈ ನಿರ್ಬಂಧಗಳು ಏಕಪಕ್ಷೀಯವಾಗಿವೆ. ಭಾರತದ ಪ್ರದೇಶದೊಳಗೇ ಭಾರತದ ಕಾನೂನುಬದ್ಧ ಸಂಪನ್ಮೂಲಗಳ ಅಭಿವೃದ್ಧಿಯನ್ನು ನಿರ್ಬಂಧಿಸಲಾಗಿದೆ. ಆದರೆ ಪಾಕಿಸ್ತಾನದ ಮೇಲೆ ಸಮಾನವಾದ ಪಾರದರ್ಶಕತೆ ಅಥವಾ ನಿರ್ಬಂಧದ ಅವಶ್ಯಕತೆಗಳನ್ನು ವಿಧಿಸಿಲ್ಲ.

ಇದರ ಫಲವಾಗಿ, ಈ ಒಪ್ಪಂದವು ಮೇಲ್ದಂಡೆಯ ದೇಶವಾದ ಭಾರತವನ್ನು ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಒಳಪಟ್ಟ ಪಕ್ಷವಾಗಿ ಪರಿಗಣಿಸುತ್ತದೆ. ಆದರೆ ಕೆಳದಂಡೆಯ ದೇಶವು ಖಚಿತ ನೀರಿನ ಹರಿವಿನಿಂದ ಲಾಭ ಪಡೆಯುತ್ತದೆ.

**- ಪ್ರದೀಪ್ ಕುಮಾರ ಸಕ್ಸೇನಾ,** (ಲೇಖಕರು, ನಿವೃತ್ತ ಸಿಂಧೂ ಜಲ ಒಪ್ಪಂದ ಆಯುಕ್ತರು)

---

# ಕೆಸುವಿನ ಎಲೆಯಲ್ಲಿದೆ ಆರೋಗ್ಯದ ರಹಸ್ಯ



ಮಳೆಗಾಲ ಪ್ರಾರಂಭವಾದೊಡನೆಯೇ ಮಲೆನಾಡು, ಕರಾವಳಿ ಭಾಗಗಳಲ್ಲಿ ಕೆಸುವಿನ ಎಲೆಗಳು ಹುಟ್ಟಿಕೊಳ್ಳುತ್ತವೆ. ಉಳಿದ ಸಮಯದಲ್ಲೂ ಸಾಮಾನ್ಯವಾಗಿ ಎಲ್ಲರ ಮನೆಗಳಲ್ಲೂ ಕೆಸು (ಪತ್ರೊಡೆ ಎಲೆ) ವಿನ ಎಲೆ ಇದ್ದೇ ಇರುತ್ತದೆ. ಮನೆಯಲ್ಲಿ ತರಕಾರಿ ಇಲ್ಲದ ಸಮಯದಲ್ಲಿ ಈ ಕೆಸುವಿನ ಎಲೆಯಿಂದ ಪತ್ರೊಡೆ ಎನ್ನುವ ರುಚಿಕರವಾದ ಖ್ಯಾದವನ್ನು ಮಾಡುತ್ತಾರೆ. ಕೆಲವು ಕಡೆ ಎಲೆಯ ಮೇಲೆ ಮಸಾಲೆಯನ್ನು ಹಚ್ಚಿ, ಸುರುಳಿ ಸುತ್ತಿ ಬೇಯಿಸಿ, ತುಂಡರಿಸಿ ತಿನ್ನುತ್ತಾರೆ. ಕೆಲವರು ಎಲೆಗಳನ್ನೇ ಸಣ್ಣ ಸಣ್ಣ ತುಂಡು ಮಾಡಿ ಅದನ್ನು ನೇರವಾಗಿ ಮಸಾಲೆಗೆ ಹಾಕಿ ಬೇಯಿಸಿ ತಿನ್ನುತ್ತಾರೆ. ಸುರುಳಿ ಸುತ್ತಿದ ಪತ್ರೊಡೆಯನ್ನು ಸ್ವಲ್ಪ ತೆಂಗಿನ ಎಣ್ಣೆ ಹಾಕಿ ತವಾದ ಮೇಲೆ ಹುರಿದು ತಿಂದರೆ ಅದರ ರುಚಿ ಅಸದಳ.

ಕರಾವಳಿ ಹಾಗೂ ಮಲೆನಾಡು ಪ್ರದೇಶದ ಜನರಿಗೆ ಕೆಸುವಿನ ಎಲೆಗಳು ಹೊಸದೇನಲ್ಲ. ಮಳೆಗಾಲದಲ್ಲಿ ಪ್ರಕೃತಿ ಹೇರಳವಾಗಿ ಬೆಳೆಯುವ ಈ ಎಲೆಗಳಿಂದ ವಿವಿಧ ಬಗೆಯ ಖಾದ್ಯಗಳನ್ನು ತಯಾರಿಸುವ ಪರಂಪರೆ ಹಳ್ಳಿಗಳಲ್ಲಿ ಇಂದಿಗೂ ಜೀವಂತವಾಗಿದೆ. ರುಚಿಯ ಜೊತೆಗೆ ಆರೋಗ್ಯದ ದೃಷ್ಟಿಯಿಂದಲೂ ಕೆಸುವಿನ ಎಲೆಗಳು ಬಹಳ ಉಪಯುಕ್ತವೆಂದು ಪೌಷ್ಟಿಕ ತಜ್ಞರು ಅಭಿಪ್ರಾಯಪಡುತ್ತಾರೆ.

ಕೆಸುವಿನ ಎಲೆ ಮತ್ತು ದಂಟಿನಲ್ಲಿ ವಿಟಮಿನ್ ಸಿ, ವಿಟಮಿನ್ ಎ, ಕ್ಯಾಲ್ಸಿಯಂ, ಫಾಸ್ಫರಸ್, ನಾರು (ಫೈಬರ್) ಮತ್ತು ಕ್ಯಾಲ್ಸಿಯಂ ಆಕ್ಸಲೇಟ್ ಸೇರಿದಂತೆ ಹಲವು ಪೋಷಕಾಂಶಗಳು ಅಡಕವಾಗಿವೆ. ಈ ಹಿನ್ನೆಲೆಯಲ್ಲೇ, ಕೆಸುವಿನ ಎಲೆಗಳಲ್ಲಿ ಇರುವ ಔಷಧೀಯ ಗುಣಗಳ ಬಗ್ಗೆ ಇಲ್ಲಿ ತಿಳಿಯೋಣ.

ಕರುಳಿನ ಕ್ಯಾನ್ಸರ್ ಅಪಾಯ ಕಡಿಮೆ ಮಾಡಲು ಸಹಕಾರಿ: ಕೆಸುವಿನ ಎಲೆಗಳು ವಿಟಮಿನ್ ಸಿ ಯ ಉತ್ತಮ ಮೂಲವಾಗಿವೆ. ಇದು ಶಕ್ತಿಶಾಲಿ ಆಂಟಿಆಕ್ಸಿಡೆಂಟ್ ಆಗಿದ್ದು, ದೇಹದಲ್ಲಿನ ಹಾನಿಕಾರಕ ಮುಕ್ತ ರಾಡಿಕಲ್‌ಗಳನ್ನು ನಿಯಂತ್ರಿಸುವಲ್ಲಿ ಸಹಾಯ ಮಾಡುತ್ತದೆ. ಕೆಲವು ಅಧ್ಯಯನಗಳ ಪ್ರಕಾರ, ವಿಟಮಿನ್ ಸಿ ಯ ಕ್ಯಾನ್ಸರ್ ಕೋಶಗಳ ಬೆಳವಣಿಗೆಯನ್ನು ನಿಧಾನಗೊಳಿಸಲು ಸಹಕಾರಿಯಾಗಿದೆ. ನಿಯಮಿತ ಹಾಗೂ ಸಮತೋಲಿತ ಪ್ರಮಾಣದಲ್ಲಿ ಕೆಸುವಿನ ಎಲೆಗಳನ್ನು ಆಹಾರದಲ್ಲಿ ಸೇರಿಸುವುದು ಕರುಳಿನ ಕ್ಯಾನ್ಸರ್ ಅಪಾಯವನ್ನು ಕಡಿಮೆ ಮಾಡಬಹುದು ಎಂದು ಸಂಶೋಧನೆಗಳು ಸೂಚಿಸುತ್ತವೆ.

ಕೆಸುವಿನ ಎಲೆಗಳಲ್ಲಿ ಸಮೃದ್ಧವಾಗಿರುವ ವಿಟಮಿನ್ ಎ ಕಣ್ಣಿನ ಆರೋಗ್ಯಕ್ಕೆ ಅತ್ಯಗತ್ಯ. ಇದು ದೃಷ್ಟಿಯನ್ನು ಕಾಪಾಡಲು, ವಯಸ್ಸಿನೊಂದಿಗೆ ಬರುವ ಮ್ಯಾಕ್ಯುಲರ್ ಡಿಜೆನರೇಶನ್ ಮತ್ತು ಕಣ್ಣಿನ ಪೊರೆ ಸಮಸ್ಯೆಗಳನ್ನು ತಡೆಯಲು ಸಹಾಯ ಮಾಡುತ್ತದೆ. ವಿಟಮಿನ್ ಎ ಕಣ್ಣಿನ ಕಾರ್ನಿಯಾವನ್ನು ಆರೋಗ್ಯವಾಗಿಡುವ ಮೂಲಕ ಸ್ಪಷ್ಟ ದೃಷ್ಟಿಗೆ ನೆರವಾಗುತ್ತದೆ. ಪ್ರತಿರಕ್ಷಣಾ ವ್ಯವಸ್ಥೆ ಬಲಪಡಿಸುತ್ತದೆ.



ವಿಟಮಿನ್ ಸಿ ಅಧಿಕವಾಗಿರುವುದರಿಂದ, ಕೆಸುವಿನ ಎಲೆಗಳು ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಹಕಾರಿಯಾಗುತ್ತವೆ. ಕಿ ಕೋಶಗಳು ಮತ್ತು ಫಾಗೋಸೈಟ್‌ಗಳಂತಹ ರೋಗನಿರೋಧಕ ಕೋಶಗಳು ಸರಿಯಾಗಿ ಕಾರ್ಯನಿರ್ವಹಿಸಲು ವಿಟಮಿನ್ ಸಿ ಅಗತ್ಯವಾಗಿರುತ್ತದೆ. ಇದರ ಕೊರತೆ ಇದ್ದರೆ ದೇಹವು ಸೋಂಕುಗಳ ವಿರುದ್ಧ ಸಮರ್ಪಕವಾಗಿ ಹೋರಾಡಲು ಸಾಧ್ಯವಾಗುವುದಿಲ್ಲ.

ಅಧಿಕ ರಕ್ತದೊತ್ತಡ ನಿಯಂತ್ರಣಕ್ಕೆ ನೆರವು: ಕೆಸುವಿನ ಎಲೆಗಳಲ್ಲಿ ಸಪೋನಿನ್‌ಗಳು, ಟ್ಯಾನಿನ್‌ಗಳು, ಫ್ಲೇವನಾಯ್‌ಗಳು ಮತ್ತು ಕಾರ್ಬೋಹೈಡ್ರೇಟ್‌ಗಳು ಅಡಕವಾಗಿವೆ. ಇವುಗಳು ರಕ್ತದೊತ್ತಡವನ್ನು ನಿಯಂತ್ರಿಸಲು- ಸಹಾಯ ಮಾಡುತ್ತವೆ ಎಂದು ತಜ್ಞರು ಹೇಳುತ್ತಾರೆ. ಅಧಿಕ ರಕ್ತದೊತ್ತಡವು ಹೃದ್ರೋಗ ಮತ್ತು ಪಾರ್ಶ್ವವಾಯುವಿನ ಅಪಾಯವನ್ನು ಹೆಚ್ಚಿಸುವುದರಿಂದ, ಕೆಸುವಿನ ಎಲೆಗಳನ್ನು ಆಹಾರದಲ್ಲಿ ಸೇರಿಸುವುದು ಹೃದಯದ ಆರೋಗ್ಯಕ್ಕೂ ಲಾಭಕರ.

ಮಧುಮೇಹ ನಿಯಂತ್ರಣಕ್ಕೆ ಸಹಕಾರಿ: ಕೆಲವು ಅಧ್ಯಯನಗಳ ಪ್ರಕಾರ, ಕೊಲೊಕಾಸಿಯಾ ಎಸ್ಕುಲೆಂಟಾ ಸಸ್ಯದ ಅಂಶಗಳು ರಕ್ತದಲ್ಲಿನ ಗ್ಲುಕೋಸ್ ಮಟ್ಟವನ್ನು ನಿಯಂತ್ರಿಸಲು ಸಹಾಯ ಮಾಡುತ್ತವೆ. ಇದು ಮಧುಮೇಹ ಹೊಂದಿರುವವರಿಗೆ ಸಹಾಯಕವಾಗಬಹುದು. ಆದರೆ ಮಧುಮೇಹಿಗಳು ವೈದ್ಯರ ಸಲಹೆಯೊಂದಿಗೆ ಮಾತ್ರ ಆಹಾರದಲ್ಲಿ ಇದನ್ನು ಸೇರಿಸಿಕೊಳ್ಳುವುದು ಸೂಕ್ತ.

ಎಚ್ಚರಿಕೆ ಅಗತ್ಯ: ಕೆಸುವಿನ ಎಲೆಗಳನ್ನು ಸದಾ ಚೆನ್ನಾಗಿ ಬೇಯಿಸಿ ಮಾತ್ರ ಸೇವಿಸಬೇಕು. ಕಚ್ಚಾ ಅಥವಾ ಅರೆಬೆಂದ ಎಲೆಗಳಿಂದ ಅಲರ್ಜಿಯಾಗಿ ತುರಿಕೆಯಾಗುವ ಸಾಧ್ಯತೆ ಇರುವುದರಿಂದ ಎಚ್ಚರಿಕೆ ಅಗತ್ಯ.

ತಜ್ಞರ ಸಲಹೆ: ಕೆಸುವಿನ ಎಲೆಗಳು ಪೌಷ್ಟಿಕ ಹಾಗೂ ಆರೋಗ್ಯಕಾರಿ ಆಹಾರವಾಗಿದರೂ, ಇವು ಔಷದಿಗೆ ಪರ್ಯಾಯವಲ್ಲ, ಗಂಭೀರ ಕಾಯಿಲೆಗಳಿದ್ದಲ್ಲಿ ವೈದ್ಯಕೀಯ ಸಲಹೆ ಅತ್ಯಗತ್ಯವೆಂದು ತಜ್ಞರು ಎಚ್ಚರಿಸುತ್ತಾರೆ. ಕೆಸುವಿನ ಎಲೆಯ ಖಾದ್ಯಗಳು ಕೇವಲ ಮಳೆಗಾಲದಷ್ಟೇ ಅಲ್ಲದೇ ಬೇರೆ ಸಮಯದಲ್ಲೂ ತಿನ್ನಲು ಯೋಗ್ಯ. ಹಲವಾರು ವಿಧದ ಕೆಸುವಿನ ಎಲೆಗಳಿವೆ. ಅದರಲ್ಲಿ ಒಂದೆರಡು ಪ್ರಕಾರ ಕೇವಲ ಮಳೆಗಾಲದಲ್ಲಿ ಮಾತ್ರ ಹುಟ್ಟಿಕೊಳ್ಳುತ್ತವೆ. ಇವುಗಳನ್ನು ತಿನ್ನುವುದಕ್ಕೂ ಮೊದಲು ಜಾಗೃತೆ ವಹಿಸುವುದು ಅತ್ಯಗತ್ಯ. ಕೆಸುವಿನಲ್ಲಿ ಕಪ್ಪು ದಂಟಿನಿಂದಲೂ ರುಚಿಕರವಾದ ಖಾದ್ಯವನ್ನು ತಯಾರಿಸುತ್ತಾರೆ. ಕೆಸುವಿನ ಗಿಡದ ಅಡಿಯಲ್ಲಿ ಗೆಡ್ಡೆಗಳು ಬೆಳೆಯುತ್ತವೆ. ಇವುಗಳೂ ತಿನ್ನಲು ಯೋಗ್ಯ. ಕೆಲವು ಗೆಡ್ಡೆಗಳು ತುರಿಸುವ ಸಂಭವ ಇದ್ದರೂ ಉತ್ತಮ ರುಚಿರವಾದ ಖಾದ್ಯವನ್ನು ಇದರಿಂದ ತಯಾರಿಸಬಹುದು.

# ಸೆಪ್ಟೆಂಬರ್ 12-13ರಂದು ನವದೆಹಲಿಯಲ್ಲಿ ಬ್ರಿಕ್ಸ್ ಶೃಂಗಸಭೆ

## ರಷ್ಯಾ ಅಧ್ಯಕ್ಷ ಪುಟಿನ್ ಭಾಗಿ | ಮಹತ್ವದ ಒಪ್ಪಂದಗಳ ನಿರೀಕ್ಷೆ

• ಪ್ರಜೋದಯ ವರದಿ

**ನವದೆಹಲಿ:** ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಸೆ. 12 ಮತ್ತು 13ರಂದು ಭಾರತದ ರಾಜಧಾನಿ ನವದೆಹಲಿಯಲ್ಲಿ ನಡೆಯಲಿರುವ ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ.

ರಷ್ಯಾ ಅಧ್ಯಕ್ಷರ ಭಾರತ ಪ್ರವಾಸ ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿದೆ. ಈ ಕುರಿತು ಅಧಿಕೃತ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ದಕ್ಷಿಣ ಆಫ್ರಿಕಾದಲ್ಲಿರುವ ರಷ್ಯಾ ರಾಯಭಾರ ಕಚೇರಿ, ನಮ್ಮ ಅಧ್ಯಕ್ಷರು ಭಾರತ ಭೇಟಿಗೆ ಎದುರು ನೋಡುತ್ತಿದ್ದಾರೆಂದು ಹೇಳಿದೆ. ಪುಟಿನ್ ಅವರ ಭಾರತ ಭೇಟಿ ಸಂದರ್ಭದಲ್ಲಿ ಪ್ರಧಾನಿ ಮೋದಿ ಅವರೊಂದಿಗೆ

ದ್ವಿಪಕ್ಷೀಯ ರಾಜತಾಂತ್ರಿಕ ಮಾತುಕತೆಗಳು ನಡೆಯಲಿವೆ ಎನ್ನಲಾಗಿದೆ. ಕ್ರೆಮ್ಲಿನ್ ಸಹಾಯಕ ಯೂರಿ ಉಷಕೋವ್ ಈ ಬಗ್ಗೆ ದೃಢೀಕರಣ ನೀಡಿದ್ದಾರೆಂದು ದಕ್ಷಿಣ ಆಫ್ರಿಕಾದಲ್ಲಿರುವ ರಷ್ಯಾ ರಾಯಭಾರ ಕಚೇರಿ ತನ್ನ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದೆ.

ಸೆಪ್ಟೆಂಬರ್‌ನಲ್ಲಿ ಬ್ರಿಕ್ಸ್‌ನ ವಾರ್ಷಿಕ ಶೃಂಗಸಭೆಯನ್ನು ಆಯೋಜಿಸಲಿರುವ ಭಾರತ ಈ ಗುಂಪಿನ ಅಧ್ಯಕ್ಷತೆ ವಹಿಸಿದೆ. 2025ರ ಡಿಸೆಂಬರ್‌ನಲ್ಲಿ ನಡೆದ 23ನೇ ಭಾರತ-ರಷ್ಯಾ ವಾರ್ಷಿಕ ಶೃಂಗಸಭೆಯಲ್ಲಿ ಭಾಗವಹಿಸಲು ಪುಟಿನ್ ಭಾರತ ಪ್ರವಾಸ ಕೈಗೊಂಡಿದ್ದರು. ಈ ವೇಳೆ ರಷ್ಯಾ ಅಧ್ಯಕ್ಷರು ನರೇಂದ್ರ ಮೋದಿ ಭಾರತದಲ್ಲಿರುವುದು ಭಾರತೀಯರ ಅದೃಷ್ಟ ಎಂದು ಹೇಳುವ ಮೂಲಕ ಗಮನ ಸೆಳೆದಿದ್ದರು.

ಈ ತಿಂಗಳ ಆರಂಭದಲ್ಲಿ ರಷ್ಯಾದ ವಿದೇಶಾಂಗ ಸಚಿವ ಸೆರ್ಗೆಯ್ ಲಾವ್ರೊವ್ ಅವರು ಬ್ರಿಕ್ಸ್ ವಿದೇಶಾಂಗ ಸಚಿವರ ಸಭೆಯಲ್ಲಿ ಭಾಗವಹಿಸಲು ದೆಹಲಿಗೆ ಭೇಟಿ ನೀಡಿದ್ದಾಗ ಪ್ರಧಾನಿ ನರೇಂದ್ರ ಮೋದಿ ಈ ವರ್ಷ ರಷ್ಯಾಕ್ಕೆ ಭೇಟಿ ನೀಡಲಿದ್ದಾರೆಂದು ತಿಳಿಸಿದ್ದರು.

ಮೂಲತಃ ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾಗಳನ್ನು ಒಳಗೊಂಡಿದ್ದ ಬ್ರಿಕ್ಸ್ 2024ರಲ್ಲಿ ಈಜಿಪ್ಟ್, ಇಥಿಯೋಪಿಯಾ, ಇರಾನ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ದೇಶಗಳನ್ನು ಸೇರಿಸಿಕೊಂಡಿತ್ತು. 2025ರಲ್ಲಿ ಇಂಡೋನೇಷ್ಯಾ ಕೂಡ ಬ್ರಿಕ್ಸ್ ಸದಸ್ಯತ್ವವನ್ನು ಪಡೆಯಿತು.

ಭಾರತದ ವಿದೇಶಾಂಗ ಸಚಿವ ಡಾ.ಎಸ್. ಜೈಶಂಕರ್ ಜೊತೆಗಿನ ಸಭೆಯ ಬಳಿಕ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ್ದ ರಷ್ಯಾದ ವಿದೇಶಾಂಗ ಸಚಿವ ಸೆರ್ಗೆ ಲಾವ್ರೊವ್, ಮಧ್ಯಪ್ರಾಚ್ಯ ಶಾಂತಿ ಸ್ಥಾಪನೆಯಲ್ಲಿ ಭಾರತ ಪ್ರಮುಖ ಪಾತ್ರ ನಿರ್ವಹಿಸಬೇಕೆಂದು ಮನವಿ ಮಾಡಿದ್ದರು. ಯುದ್ಧದಲ್ಲಿ ನಿರತವಾಗಿರುವ ಅಮೇರಿಕಾ ಮತ್ತು ಇರಾನ್ ದೇಶಗಳನ್ನು ಭಾರತ ಮಾತುಕತೆ ಮೇಜಿಗೆ ತರಬಹುದು ಲಾವ್ರೊವ್ ಹೇಳಿದ್ದರು.

ವಿಶ್ವದ 11 ಪ್ರಮುಖ ಉದಯೋನ್ಮುಖ ಆರ್ಥಿಕತೆಗಳನ್ನು ಒಟ್ಟುಗೂಡಿಸುವ ಮೂಲಕ, ಬ್ರಿಕ್ಸ್ ಪ್ರಭಾವಶಾಲಿ ಜಾಗತಿಕ ಗುಂಪಾಗಿ ಹೊರಹೊಮ್ಮಿದೆ. ಇದು ಜಾಗತಿಕ ಜನಸಂಖ್ಯೆಯ ಸುಮಾರು ಶೇ. 49.5ರಷ್ಟು, ಜಾಗತಿಕ ಜಿಡಿಪಿಯ ಸುಮಾರು ಶೇ. 40ರಷ್ಟು ಮತ್ತು ಜಾಗತಿಕ ವ್ಯಾಪಾರದ ಸುಮಾರು ಶೇ. 26ರಷ್ಟನ್ನು ಪ್ರತಿನಿಧಿಸುತ್ತದೆ.



### ದ್ವಿಪಕೀಯ ಬಾಂಧವ್ಯ ವೃದ್ಧಿಗೆ ಪ್ರಧಾನಿ ನರೇಂದ್ರ ಮೋದಿ ಒತ್ತು

ಐಸ್‌ಲ್ಯಾಂಡ್, ಫಿನ್‌ಲ್ಯಾಂಡ್ ಮತ್ತು ಡೆನ್ಮಾರ್ಕ್ ಪ್ರಧಾನಿಗಳ ಜೊತೆ ಪ್ರತ್ಯೇಕ ಸಭೆಗಳಲ್ಲಿ ಭಾರತ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಿದ್ದು, ವ್ಯಾಪಾರ ಹಾಗು ನವೀಕರಿಸಬಹುದಾದ ಇಂಧನದಂತಹ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಬಾಂಧವ್ಯ ಮತ್ತಷ್ಟು ಗಟ್ಟಿಗೊಳಿಸುವುದಕ್ಕೆ ಒತ್ತು ನೀಡಿದ್ದಾರೆ.

3ನೇ ಭಾರತ-ನಾರ್ಡಿಕ್ ಶೃಂಗಸಭೆಗೂ ಮುನ್ನ ಈ ಪ್ರತ್ಯೇಕ ಸಭೆಗಳು ನಡೆದಿವೆ. ಐಸ್‌ಲ್ಯಾಂಡ್ ಪ್ರಧಾನಿ ಕ್ರಿಸ್ಟ್ರನ್ ಫ್ರಾಸ್ಟಾಡೊಟೀರ್, ಫಿನ್‌ಲ್ಯಾಂಡ್ ಪ್ರಧಾನಿ ಪೆಟ್ಟೆರಿ ಒರ್ಪೊ ಮತ್ತು ಡೆನ್ಮಾರ್ಕ್ ಪ್ರಧಾನಿ ಮ್ಯಾಟೆ ಫ್ರೆಡೆರಿಕ್ಸೆನ್ ಅವರೊಂದಿಗೆ ಪ್ರಧಾನಿ ಮೋದಿ ಚರ್ಚಿಸಿದ್ದಾರೆ.

ಈ ಸಂದರ್ಭದಲ್ಲಿ ಭಾರತ ಹಾಗು ನಾರ್ಡಿಕ್ ದೇಶಗಳ ನಡುವಣ ದ್ವಿಪಕ್ಷೀಯ ಬಾಂಧವ್ಯ ವೃದ್ಧಿಯ ಕುರಿತು ಚರ್ಚಿಸಲಾಯಿತು. ನಾರ್ಡಿಕ್ ದೇಶಗಳು ಉತ್ತರ ಯುರೋಪ್ ಹಾಗೂ ಉತ್ತರ ಅಟ್ಲಾಂಟಿಕ್‌ನಲ್ಲಿರುವ ಭೌಗೋಳಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಪ್ರದೇಶವನ್ನು ಪ್ರತಿನಿಧಿಸುತ್ತದೆ. ಇದು ಡೆನ್ಮಾರ್ಕ್, ಫಿನ್‌ಲ್ಯಾಂಡ್, ಐಸ್‌ಲ್ಯಾಂಡ್, ನಾರ್ವೆ ಹಾಗೂ ಸ್ವೀಡನ್ ದೇಶಗಳನ್ನು ಒಳಗೊಂಡಿವೆ.

# ಮೇ 21, 22ರಂದು ವಿದ್ಯುತ್ ವ್ಯತ್ಯಯ

• ಪ್ರಜೋದಯ ವರದಿ

**ಬಾಣಾವರ:** ಅರಸೀಕೆರೆ ವಿದ್ಯುತ್ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ವ್ಯಾಪ್ತಿಯಲ್ಲಿ ಪಿಎಂ ಕುಸುಮ್ ಯೋಜನೆ ಸೋಲಾರ್ ಪ್ಲಾಂಟ್ ಅನುಷ್ಠಾನಗೊಳಿಸಲು ಲಿಂಕ್ ಲೈನ್ ಕಾಮಗಾರಿಯನ್ನು ಕೈಗೊಳ್ಳಬೇಕಾಗಿರುವುದರಿಂದ ಮೇ 21, 22ರಂದು ಬೆಳಿಗ್ಗೆ 10 ರಿಂದ ಸಂಜೆ 6ಗಂಟೆ ವರೆಗೆ ಕಲ್ಲು ನಾಯಕನಹಳ್ಳಿ, ಬೈರಾಂಬೂಧಿ, ಹಿರಿಯೂರು, ಚಿಕ್ಕೂರು, ಗೊಲ್ಲರಹಳ್ಳಿ, ಬಿಸಿಲೆಹಳ್ಳಿ, ಕಾಟಿಕೆರೆ, ಹೊಸ ಕಲ್ಲನಾಯಕನಹಳ್ಳಿ, ಕಾರಬೋರನ ಹಟ್ಟಿ, ಬೆಟ್ಟದಪುರ, ಹರಿಹರಪುರ, ಲೈಲಾಪುರ, ಕಾನೀಹಳ್ಳಿ, ಹೊಸಳ್ಳಿ, ಸುತ್ತಮುತ್ತ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

# ರೈಲಿನಲ್ಲಿ ಸಾಗಿಸುತ್ತಿದ್ದ ಮದ್ಯ ವಶ

• ಪ್ರಜೋದಯ ವರದಿ

**ಹಾಸನ:** ಅಕ್ರಮವಾಗಿ ರೈಲಿನಲ್ಲಿ ಸಾಗಿಸುತ್ತಿದ್ದ ಅಂದಾಜು 5 ಸಾವಿರ ರೂ. ಮೌಲ್ಯದ ಮದ್ಯವನ್ನು ರೈಲ್ವೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಖಚಿತ ಮಾಹಿತಿ ಮೇರೆಗೆ ವಾಸ್ಕೋಡ ಗಾಮಾ-ಯಶವಂತಪುರ ಎಕ್ಸ್‌ಪ್ರೆಸ್ ರೈಲಿನಲ್ಲಿ ತಪಾಸಣೆ ನಡೆಸಿದಾಗ ಪದಾರ್ಥ ಸಿಕ್ಕಿದೆ. ಬಾಣಾವರದಿಂದ ಅರಸೀಕೆರೆ ಮಾರ್ಗಮಧ್ಯೆ ಸಾಮಾನ್ಯ ಬೋಗಿಯಲ್ಲಿ ವಾರಸುದಾರರಿಲ್ಲದ ಪ್ಲಾಸ್ಟಿಕ್ ಚೀಲ ಪತ್ತೆಯಾಗಿದೆ. ಪ್ರಯಾಣಿಕರನ್ನು ವಿಚಾರಿಸಿದಾಗ ಯಾರೂ ಸಹ ಆ ಚೀಲ ತಮ್ಮದೆಂದು ಒಪ್ಪಿಕೊಂಡಿಲ್ಲ.

ಪರಿಶೀಲನೆ ವೇಳೆ ವಿವಿಧ ಬ್ರಾಂಡ್‌ಗಳ ಒಟ್ಟು 12 ಮದ್ಯದ ಬಾಟಲಿಗಳು



ಪತ್ತೆಯಾಗಿದ್ದು, ಅವುಗಳ ಒಟ್ಟು ಮೌಲ್ಯ 5,123 ರೂ. ಎಂದು ಅಂದಾಜಿಸಲಾಗಿದೆ. ಅಬಕಾರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆಂದು ಮೈಸೂರು ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಹಾಗು ಸಾರ್ವಜನಿಕ ಸಂಪರ್ಕ ಅಧಿಕಾರಿ ಗಿರೀಶ ಧರ್ಮರಾಜ ಕಲಗೊಂಡ ಅವರು ತಿಳಿಸಿದ್ದಾರೆ.

# ಮನೆ ಬೀಗ ಮುರಿದು ಕಳ್ಳತನ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಖಚಿತಪಡಿಸಿಕೊಂಡು ಬೀಗ ಮುರಿದು ಒಳನುಗ್ಗಿರುವ ಕಳ್ಳರು 15 ಗ್ರಾಂ ತೂಕದ ಚಿನ್ನಾಭರಣ ಹಾಗು 30 ಸಾವಿರ ರೂ. ನಗದು ಕಳವು ಮಾಡಿರುವ ಘಟನೆ ತಾಲ್ಲೂಕಿನ ಬಾಗೂರು ಗ್ರಾಮದಲ್ಲಿ ನಡೆದಿದೆ.

ಭಾಗ್ಯಮ್ಮ ಎಂಬುವವರ ಮನೆಯಲ್ಲಿ ಮೇ 16 ರಿಂದ 18ರ ಅವಧಿಯಲ್ಲಿ ಕಳ್ಳತನವಾಗಿದೆ. ಕುಟುಂಬ ಸಮೇತ ತಿರುಪತಿ ದೇವಸ್ಥಾನಕ್ಕೆ ಹೋಗಿದ್ದನ್ನು ಖಚಿತಪಡಿಸಿಕೊಂಡಿರುವ ಕಳ್ಳರು ರಾತ್ರಿ ವೇಳೆಯಲ್ಲಿ ಕೃತ್ಯ ಎಸಗಿದ್ದಾರೆ. ಬಾಗಿಲು ಮುರಿದಿರುವ ಕಳ್ಳರು ಬೀರುವಿನಲ್ಲಿಟ್ಟಿದ್ದ 15 ಗ್ರಾಂ ತೂಕದ ಚಿನ್ನಾಭರಣ, 2 ತಾಮ್ರದ ಬಿಂದಿಗೆ ಮತ್ತು 30 ಸಾವಿರ ರೂ. ನಗದು ಕಳವು ಮಾಡಿದ್ದಾರೆ. ನುಗ್ಗೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಯೂತ್ ಕಾಂಗ್ರೆಸ್ ಪದಾಧಿಕಾರಿಗಳ ಗಲಾಟೆ: ವರದಿಗೆ ಸೂಚನೆ

• ಪ್ರಜೋದಯ ವರದಿ



**ಬೆಂಗಳೂರು:** ಪದಾಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಂಡಿದ್ದ ಕಾರಣಕ್ಕಾಗಿ ಯೂತ್ ಕಾಂಗ್ರೆಸ್ ನಾಯಕರ ನಡುವೆ ಕೆಪಿಸಿಸಿ ಕಚೇರಿಯಲ್ಲಿ ನಡೆದ ಗಲಾಟೆಯನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಗಂಭೀರವಾಗಿ ಪರಿಗಣಿಸಿದು, ಸತ್ಯಾಸತ್ಯತೆಯ ವರದಿ ನೀಡಲು ಸೂಚನೆ ನೀಡಿದ್ದಾರೆ.

ಯೂತ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಹಾಗು ದೀಪಿಕಾ ರೆಡ್ಡಿ ಬಣಗಳ ನಡುವೆ ಸೋಮವಾರ ಜೋರು ಗಲಾಟೆ ನಡೆದಿತ್ತು. ಕೆಪಿಸಿಸಿ ಕಚೇರಿಯಲ್ಲೇ ಪದಾಧಿಕಾರಿಗಳು ಕೈ-ಕೈ ಮಿಲಾಯಿಸುವ ಹಂತಕ್ಕೆ ತಲುಪಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋ ಹರಿದಾಡುತ್ತಿವೆ. ಇದು ಪಕ್ಷಕ್ಕೆ ಮುಜುಗುರ ಉಂಟು ಮಾಡಿದ್ದು, ಶಿವಕುಮಾರ್ ಅವರು ಗಂಭೀರವಾಗಿ ಪರಿಗಣಿಸಿದ್ದಾರೆ. ಘಟನೆಯ ಬಗ್ಗೆ ಪರಾಮರ್ಶೆ ನಡೆಸುವಂತೆ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ.ಚಂದ್ರಶೇಖರ್ ಅವರಿಗೆ ಸೂಚನೆ ನೀಡಿದ್ದಾರೆ. ಆ ಹಿನ್ನಲೆಯಲ್ಲಿ ಜಿ.ಸಿ.ಚಂದ್ರಶೇಖರ್ ಚರ್ಚಿಸಿದ್ದಾರೆಂಬ ಮಾಹಿತಿ ಇದೆ.

**ಶೋಕಾಸ್ ನೋಟೀಸ್:** ಈ ಘಟನೆಯ ಹಿನ್ನಲೆಯಲ್ಲಿ ಎಐಸಿಸಿ ಯೂಥ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ನಿಗಮ್ ಭಂಡಾರಿ ಅವರು ದೀಪಿಕಾ ರೆಡ್ಡಿ ಬಣಕ್ಕೆ ಶೋಕಾಸ್ ನೋಟೀಸ್ ನೀಡಿದ್ದಾರೆ. ದೀಪಿಕಾ ರೆಡ್ಡಿ ಬಣದ ಪದಾಧಿಕಾರಿಗಳಿಗೆ ವಾರದೊಳಗೆ ಉತ್ತರ ನೀಡುವಂತೆ ನಿಗಮ್ ಭಂಡಾರಿ ನೋಟೀಸ್ ಜಾರಿಗೊಳಿಸಿದ್ದಾರೆ. ಯೂತ್ ಕಾಂಗ್ರೆಸ್ ಉಪಾಧ್ಯಕ್ಷರಾದ ದೀಪಿಕಾ ರೆಡ್ಡಿ, ಸಂದೀಪ್, ಮಂಜುನಾಥ್ ಚೆಟ್ಟಿ, ಪ್ರಧಾನ ಕಾರ್ಯದರ್ಶಿ ನಿಖಿಲ್ ಕೊಂಡಜ್ಜಿ ಸೇರಿ ಹಲವರಿಗೆ ನೋಟೀಸ್ ನೀಡಲಾಗಿದೆ.

# ಉಪನ್ಯಾಸಕರ ಹೊಂದಾಣಿಕೆಯಿಂದ ಗುಣಮಟ್ಟದ ಶಿಕ್ಷಣ

## ಕಾಲೇಜು ಅಭಿವೃದ್ಧಿ ಸಮಿತಿ ಸಭೆಯಲ್ಲಿ ಶಾಸಕ ಸಿಮೆಂಟ್ ಮಂಜು ಅಭಿಮತ

• ಪ್ರಜೋದಯ ವರದಿ

**ಸಕಲೇಶಪುರ:** ಕಾಲೇಜು ಉಪನ್ಯಾಸಕರ ನಡುವಿನ ಸಮನ್ವಯ, ಉತ್ತಮ ಸಂವಹನ ಹಾಗು ಪರಸ್ಪರ ಸಹಕಾರದಿಂದ ಮಾತ್ರ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ನೀಡಲು ಸಾಧ್ಯ ಎಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಕಾಲೇಜು ಅಭಿವೃದ್ಧಿ ಸಮಿತಿಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಉಪನ್ಯಾಸಕರ ನಡುವೆ ಹೊಂದಾಣಿಕೆ ಇದ್ದಾಗ ಬೋಧನೆಯ ಗುಣಮಟ್ಟ ಹೆಚ್ಚುವುದಲ್ಲದೆ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೂ ನೆರವಾಗುತ್ತದೆ ಎಂದು ತಿಳಿಸಿದರು.



ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರೂ ಆಗಿರುವ ಶಾಸಕ ಸಿಮೆಂಟ್ ಮಂಜು ಅವರು ಕಾಲೇಜಿನ ಶೈಕ್ಷಣಿಕ ಹಾಗು ಮೂಲ ಸೌಕರ್ಯ ಅಭಿವೃದ್ಧಿ ಕುರಿತಂತೆ ಸಮಗ್ರ ಪರಿಶೀಲನೆ ನಡೆಸಿದರು. ಈ ವೇಳೆ ಪ್ರಾಂಶುಪಾಲರು ಹಾಗು ಸಮಿತಿ ಸದಸ್ಯರೊಂದಿಗೆ ಕಾಲೇಜಿನ ಮುಂದಿನ ಅಭಿವೃದ್ಧಿ ಕಾರ್ಯಗಳು, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಮತ್ತು ಈ ಶೈಕ್ಷಣಿಕ ಸಾಲಿನ ಪ್ರವೇಶಾತಿ ಕುರಿತು ಚರ್ಚಿಸಿ ಅಗತ್ಯ ಸಲಹೆ-ಸೂಚನೆಗಳನ್ನು ನೀಡಿದರು.

ನಂತರ ಉಪನ್ಯಾಸಕರನ್ನು ಹೊರತುಪಡಿಸಿ ವಿದ್ಯಾರ್ಥಿಗಳೊಂದಿಗೆ ಪ್ರತ್ಯೇಕವಾಗಿ ಸಂವಾದ ನಡೆಸಿದ ಶಾಸಕರು, ಕಾಲೇಜಿನ ಕುಂದುಕೊರತೆಗಳನ್ನು ಆಲಿಸಿದರು. ಕಾಲೇಜು ಆವರಣದಲ್ಲಿ ಯಾವುದೇ ಅನೈತಿಕ ಚಟುವಟಿಕೆಗಳಿಗೆ ಅವಕಾಶ ನೀಡಬಾರದು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದ ಅವರು, ಶೌಚಾಲಯ, ವಿದ್ಯುತ್ ವ್ಯವಸ್ಥೆ, ಸಿಸಿಟಿವಿ, ಯುಪಿಎಸ್ ಸೇರಿದಂತೆ ಬೇಸಿಗೆ ಹಿನ್ನೆಲೆ ಕೊಠಡಿಗಳಲ್ಲಿನ ಫ್ಯಾನ್‌ಗಳನ್ನು ಸುಸ್ಥಿತಿಯಲ್ಲಿ ನಿರ್ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ಸೂಕ್ತ ಸಮಯದಲ್ಲಿ ಬಸ್ ವ್ಯವಸ್ಥೆ ಕಲ್ಪಿಸಬೇಕೆಂದು ವಿದ್ಯಾರ್ಥಿಗಳು ಮನವಿ ಸಲ್ಲಿಸಿದ ಹಿನ್ನಲೆ ತಕ್ಷಣವೇ ಸಾರಿಗೆ ಇಲಾಖೆ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿದ ಶಾಸಕರು, ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಅಗತ್ಯ ಬಸ್ ವ್ಯವಸ್ಥೆ ಕಲ್ಪಿಸುವಂತೆ ನಿರ್ದೇಶನ ನೀಡಿದರು. ಸಭೆಯಲ್ಲಿ ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರಾದ ಅಣ್ಣಪ್ಪಸ್ವಾಮಿ, ಮೋಹನ್ ಕುಮಾರ್, ಪ್ರದೀಪ್, ಸುದೀಶ್, ಕೌಶಿಕ್, ಪ್ರಾಂಶುಪಾಲ ರಾದ ಸಹನಾ ಸೇರಿ ಉಪನ್ಯಾಸಕರು ಉಪಸ್ಥಿತರಿದ್ದರು

# ಪ್ರತ್ಯೇಕ ಅಪಘಾತ: ಇಬ್ಬರ ಸಾವು

• ಪ್ರಜೋದಯ ವರದಿ

**ಹಾಸನ:** ಆಲೂರು ಹಾಗು ಹಾಸನ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟು, ಇಬ್ಬರು ಗಾಯಗೊಂಡಿರುವ ಘಟನೆ ನಡೆದಿದೆ.

ಕಾರು ಡಿಕ್ಕಿಯಾಗಿ ಪಾದಚಾರಿ ಅಸುನೀಗಿರುವ ಘಟನೆ ಬಿಟ್ಟಗೌಡನಹಳ್ಳಿಯ ಎಸ್.ಎ.ಗುಜರಿ ಅಂಗಡಿ ಸಮೀಪ ನಡೆದಿದೆ. ಶ್ರೀನಗರದ ಅಫ್ಜಲ್ ಪಾಷ ಮೃತರು. ಗುಜರಿ ಅಂಗಡಿಯಲ್ಲಿ ಕೆಲಸ ಮಾಡಿಕೊಂಡಿದ್ದ ಅವರು ಸೋಮವಾರ ಬೆಳಗಿನ ಉಪಾಹಾರ ಸೇವಿಸಲೆಂದು ಮನೆಗೆ ಬರುತ್ತಿದ್ದಾಗ ಎದುರು ವೇಗವಾಗಿ ಬಂದ ಕಾರು ಡಿಕ್ಕಿಯಾಗಿದೆ. ಗಂಭೀರ ಗಾಯಗೊಂಡಿದ್ದ ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಕಾರು ಡಿಕ್ಕಿಯಾಗಿ ಯುವಕ ಮೃತಪಟ್ಟು, ಇಬ್ಬರು ಗಂಭೀರ ಗಾಯಗೊಂಡಿರುವ ಘಟನೆ ಆಲೂರು ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ 75ರ ಮಣಿಪುರ ಸಮೀಪ ನಡೆದಿದೆ.

ಕೆ.ಹೊಸಕೋಟೆ ಹೋಬಳಿ ಅಬ್ಬನ ಗ್ರಾಮದ ಕಿರಣ್ (19) ಮೃತರು. ಅದೇ ಗ್ರಾಮದ ಕಾರ್ತಿಕ್ ಹಾಗು ಲೋಕೇಶ್ ಎಂಬುವವರು ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಸೋಮವಾರ ರಾತ್ರಿ 9.30ರ ಸಮಯದಲ್ಲಿ ಮೂವರು ಡಿಯೋ ಸ್ಕೂಟರ್‌ನಲ್ಲಿ ಪಾಳ್ಯದಿಂದ ಆಲೂರು ಕಡೆಗೆ ಬರುತ್ತಿದ್ದಾಗ ಹಿಂಬದಿಯಿಂದ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದೆ.

ಆಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮಕ್ಕಳು ವಿದ್ಯೆ ಜೊತೆಗೆ ಸಂಸ್ಕಾರ ಕಲಿಯಬೇಕು



• ಪ್ರಜೋದಯ ವರದಿ

**ಸಕಲೇಶಪುರ:** ವಿದ್ಯೆ ಜೊತೆಗೆ ಸಂಸ್ಕಾರ ಅಳವಡಿಸಿಕೊಂಡರೆ ಮಾತ್ರ ವಿದ್ಯಾರ್ಥಿಗಳು ಸಾಧನೆ ಮಾಡಲು ಸಾಧ್ಯ ಎಂದು ಶಿಕ್ಷಕ ವೆಂಕಟೇಶ್ ಅವರು ಹೇಳಿದರು.

ಪಟ್ಟಣದ ರಾಘವೇಂದ್ರ ನಗರದಲ್ಲಿರುವ ಜಿಲ್ಲಾ ಬೆಳೆಗಾರರ ಭವನದಲ್ಲಿ ಕಸಬಾ ಹೋಬಳಿ ಬೆಳೆಗಾರರ ಸಂಘದಿಂದ ಆಯೋಜಿಸಲಾಗಿದ್ದ ಮಾಸಿಕ ಸಭೆ ಹಾಗು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯಧಿಕ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ, ಮೂವತ್ತು ವರ್ಷಗಳ ಹಿಂದೆ ಪ್ರಥಮ ಶ್ರೇಣಿಯಲ್ಲಿ ಎಸ್‌ಎಸ್‌ಎಲ್‌ಸಿ ಪಾಸಾದರೆ ಸರ್ಕಾರಿ ನೌಕರಿ ಸಿಗುತ್ತಿತ್ತು. ಇತ್ತೀಚಿನ ವರ್ಷಗಳಲ್ಲಿ ಪೈಪೋಟಿ ಹೆಚ್ಚಿದ್ದು, ಎಷ್ಟೇ ಅಂಕ ಪಡೆದರೂ ಕಡಿಮೆ ಎನ್ನುವಂತಾಗಿದೆ. ಹಿಂದೆ ಸಾಧನೆ ಎಂಬುದು ನಗರಗಳಿಗೆ ಸೀಮಿತವಾಗಿತ್ತು. ಆದರೆ, ಇಂದು ಗ್ರಾಮೀಣ ಭಾಗದಲ್ಲೂ ಸಹ ವಿದ್ಯಾರ್ಥಿಗಳು ನಗರ ವಿದ್ಯಾರ್ಥಿಗಳಿಗೆ ಸರಿ ಸಮಾನರಾಗಿ ಹೆಚ್ಚು ಅಂಕ ಗಳಿಸುತ್ತಿರುವುದು ಹೆಮ್ಮೆಯ ವಿಷಯವೆಂದರು.

ಆಧುನಿಕತೆ ಬೆಳೆದಂತೆ ಜೀವನ ಪದ್ಧತಿಯೂ ಬದಲಾಗಿದೆ. ಪಾಶ್ಚಿಮಾತ್ಯ ಸಂಸ್ಕೃತಿ ಅನುಕರಣೆ ಒಳ್ಳೆಯದಲ್ಲ. ಮಕ್ಕಳಲ್ಲಿ ಸಂಸ್ಕೃತಿ ಹಾಗೂ ಸಂಸ್ಕಾರ ಕಾಣೆಯಾಗುತ್ತಿರುವುದು ಬೇಸರದ ಸಂಗತಿ. ವಿದ್ಯಾರ್ಥಿಗಳು ಪೋಷಕರಿಗೆ, ಗುರು ಹಿರಿಯರಿಗೆ, ಶಿಕ್ಷಕರಿಗೆ ಮೊದಲು ಗೌರವ ಕೊಡುವುದನ್ನು ಕಲಿಯಬೇಕು. ಆಗ ಮಾತ್ರ ಕಲಿತ ವಿದ್ಯೆಗೆ ಬೆಲೆ ಬರುತ್ತದೆಂದರು.

ಕಸಬಾ ಹೋಬಳಿ ಬೆಳಗಾರರ ಸಂಘದ ಅಧ್ಯಕ್ಷ ಕೆ.ವಿ.ಮೇಘರಾಜ್ ಅವರು ಮಾತನಾಡಿ, ಬೆಳೆಗಾರರ ಸಂಘವು ಕಾಫಿ ಬೆಳೆಗಾರರ ಸಮಸ್ಯೆಗಳನ್ನು ಬಗೆಹರಿಸುವ ಜೊತೆಗೆ ಹಲವು ಸಾಮಾಜಿಕ ಸೇವಾ ಚಟುವಟಿಕೆಗಳನ್ನು ಮಾಡಿಕೊಂಡು ಬರುತ್ತಿದೆ. ಗ್ರಾಮೀಣ ಭಾಗದ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕಸಬಾ ಹೋಬಳಿ ಮಟ್ಟದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯಧಿಕ ಅಂಕಗಳನ್ನು ಪಡೆದ ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಗುತ್ತಿದೆ ಎಂದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅಧಿಕ ಅಂಕ ಪಡೆದ ಮಾನಸಿ, ಅವಿನ್ಯಾ, ನಿಮಿತಾ, ಸಾನ್ವಿ, ಮನಸಿರಿ, ಪಂಚಮಿ, ನವಮಿ ಅವರನ್ನು ಸನ್ಮಾನಿಸಲಾಯಿತು. ಜಿಲ್ಲಾ ಬೆಳೆಗಾರರ ಸಂಘದ ಅಧ್ಯಕ್ಷ ಪರಮೇಶ್, ಕಸಬಾ ಹೋಬಳಿ ಬೆಳೆಗಾರರ ಸಂಘದ ಉಪಾಧ್ಯಕ್ಷ ಬಿ.ಎಂ.ಮದನ್ ಕುಮಾರ್, ಗೌರವ ಕಾರ್ಯದರ್ಶಿ ರಾಕೇಶ್, ಜಂಟಿ ಕಾರ್ಯದರ್ಶಿ ಪುಟ್ಟರಾಜು, ಖಜಾಂಚಿ ವಿಜಿತ್ ಮತ್ತಿತರರಿದ್ದರು.

# ಅಕ್ರಮವಾಗಿ ಸಾಗಿಸುತ್ತಿದ್ದ 19 ಜಾನುವಾರುಗಳ ರಕ್ಷಣೆ

• ಪ್ರಜೋದಯ ವರದಿ

**ಹಾಸನ :** ಸಂತೆಯಲ್ಲಿ ಜಾನುವಾರುಗಳನ್ನು ಖರೀದಿಸಿ ಅಕ್ರಮವಾಗಿ ಸಾಗಿಸುತ್ತಿದ್ದ ವೇಳೆ ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳದ ಕಾರ್ಯಕರ್ತರು ತಡೆದು ನಗರ ಪೊಲೀಸ್ ಠಾಣೆಗೆ ಒಪ್ಪಿಸಿದ್ದಾರೆ.

ನಗರದ ಮಂಗಳವಾರದ ಸಂತೆಯಲ್ಲಿ 19ಕ್ಕೂ ಹೆಚ್ಚು ಜಾನುಗಳನ್ನು ಖರೀದಿಸಿ ಕೇರಳದ ಕಡೆಗೆ ಅಕ್ರಮವಾಗಿ ಸಾಗಿಸಲಾಗುತ್ತಿತ್ತು ಎಂದು ಆರೋಪಿಸಿದ್ದಾರೆ. ಈ ವೇಳೆ ಮಾತನಾಡಿದ ವಿಶ್ವ ಹಿಂದೂ ಪರಿಷತ್-ಭಜರಂಗದಳ ಪ್ರಾಂತ ಗೋ ರಕ್ಷಾ ಸಹ ಪ್ರಮುಖ್ ಶರತ್, ಬಕ್ರೀದ್ ಹಿನ್ನಲೆ ಅಕ್ರಮ ಗೋ ಸಾಗಾಣಿಕೆ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಮನವಿ ಸಲ್ಲಿಸಿದ್ದರೂ, ಪರಿಣಾಮಕಾರಿ ಕ್ರಮ ಕೈಗೊಂಡಿಲ್ಲ. ಇಂದಿನ ಕಾರ್ಯಾಚರಣೆಯಲ್ಲಿ 19 ಕ್ಕೂ ಹೆಚ್ಚು ಜಾನುವಾರುಗಳನ್ನು ರಕ್ಷಣೆ ಮಾಡಲಾಗಿದೆ. ಅವುಗಳನ್ನು ಹಾಸನದಿಂದ ಕೇರಳದ ಕಡೆಗೆ ಸಾಗಿಸಲಾಗುತ್ತಿತ್ತು ಎಂದು ತಿಳಿದು ಬಂದಿದೆ. ಖಚಿತ ಮಾಹಿತಿ ಮೇರೆಗೆ ಈಗಾಗಲೇ ಮೂರಕ್ಕೂ ಹೆಚ್ಚು ವಾಹನ ಪತ್ತೆ ಹಚ್ಚಿದ್ದು, ಕಾರ್ಯಾಚರಣೆ ಮುಂದುವರಿಯಲಿದೆ ಎಂದರು.

ಜಿಲ್ಲೆಯಲ್ಲಿ 2 ಅಕ್ರಮ ಕಸಾಯಿಖಾನೆ ಗುರುತಿಸಿ ಅವುಗಳ ಸಂಪೂರ್ಣ ಮಾಹಿತಿಯನ್ನು ಡಿವೈಎಸ್ಪಿ ಅವರಿಗೆ ನೀಡಲಾಗಿದೆ. ಕೂಡಲೇ 2 ಕಸಾಯಿಖಾನೆಗಳನ್ನು ಬಂದ್ ಮಾಡಿಸಬೇಕು. ಇಲ್ಲದಿದ್ದರೆ ನಾವೇ ಮುಚ್ಚಿಸಬೇಕಾಗುತ್ತದೆ. ಜಿಲ್ಲಾಧಿಕಾರಿ ಇತ್ತೀಚೆಗೆ ಸಭೆ ನಡೆಸಿದ ವೇಳೆ ಬಕ್ರೀದ್ ಸಂದರ್ಭದಲ್ಲಿ ಅನಧಿಕೃತ ಗೋ ಸಾಗಾಣಿಕೆ ಹಾಗು ಗೋಹತ್ಯೆ ತಡೆಯಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದರೂ, ಪೊಲೀಸರು ಮಾತ್ರ ತಡೆಯುವ ಕೆಲಸ ಮಾಡುತ್ತಿಲ್ಲವೆಂದು ಅಸಮಾಧಾನ ಹೊರ ಹಾಕಿದರು.

ಗೋಹತ್ಯೆ ನಿಷೇಧ ಕಾಯ್ದೆ ಜಾರಿಯಾಗಿದ್ದರೂ, ಜಿಲ್ಲೆಯಲ್ಲಿ ಅಕ್ರಮ ಗೋ ಸಾಗಣೆ ಮತ್ತು ಹತ್ಯೆ ನಡೆಯುತ್ತಲೇ ಇವೆ. ಗೋ ರಕ್ಷಣೆಗಾಗಿ ಸರ್ಕಾರ ಕಟ್ಟುನಿಟ್ಟಿನ ಕಾನೂನು ಜಾರಿ ಮಾಡಿದ್ದರೂ, ಅಕ್ರಮಕ್ಕೆ ಕಡಿವಾಣ ಬಿದ್ದಿಲ್ಲ. ಪೊಲೀಸರ ಕಣ್ತಪ್ಪಿಸಿ ಗೋವುಗಳನ್ನು ಸಾಗಿಸಲಾಗುತ್ತಿದೆ. ಇದರಿಂದ ಗೋ ರಕ್ಷಣೆ ಕೇವಲ ಕಾಗದದ ಮೇಲಿನ ಕಾನೂನಾಗಿ ಉಳಿದಿದೆ ಎಂದರು. ಜಿಲ್ಲಾ ಸೇವಾ ಪ್ರಮುಖ್ ವಿಕ್ಕಿ, ಜಿಲ್ಲಾ ಗೋ ರಕ್ಷಾ ಪ್ರಮುಖ್ ಶಶಿ, ನಗರ ಸಹ ಸಂಯೋಜಕ್ ಚೇತನ್ ಸೇರಿ ಮೊದಲಾದವರು ದಾಳಿಯಲ್ಲಿ ಭಾಗಿಯಾಗಿದ್ದರು.




# ಸಮಾವೇಶಕ್ಕೆ ಬಸ್ ವ್ಯವಸ್ಥೆ : ಪ್ರಯಾಣಿಕರಿಗೆ ತೊಂದರೆ

» ಮೊದಲನೇ ಪುಟದಿಂದ

ಕೆಲವೆಡೆ ಸಂಚರಿಸಿದ ಬಸ್‌ಗಳು ಪ್ರಯಾಣಿಕರಿಂದ ತುಂಬಿ ತುಳುಕುತ್ತಿದ್ದರೆ, ಹಲವು ಮಾರ್ಗಗಳಲ್ಲಿ ಬಸ್ ಸೇವೆಯೇ ಲಭ್ಯವಿಲ್ಲದ ಕಾರಣ ಜನರು ಖಾಸಗಿ ವಾಹನಗಳು, ಆಟೋ ಹಾಗು ಟೆಂಪೋಗಳನ್ನು ಅವಲಂಬಿಸಬೇಕಾಯಿತು. ಇದರಿಂದ ಸಾಮಾನ್ಯಕ್ಕಿಂತ ಹೆಚ್ಚುವರಿ ದರ ನೀಡಿ ಪ್ರಯಾಣಿಸಬೇಕಾದ ಪರಿಸ್ಥಿತಿ ಎದುರಾಯಿತು.

ಸರ್ಕಾರದ ಕಾರ್ಯಕ್ರಮಕ್ಕೆ ಬಸ್ ಬಳಸುವುದು ತಪ್ಪಲ್ಲ. ಆದರೆ, ಸಾರ್ವಜನಿಕ ಸಂಚಾರಕ್ಕೆ ತೊಂದರೆ ಆಗದಂತೆ ಪರ್ಯಾಯ ವ್ಯವಸ್ಥೆ ಮಾಡಬೇಕಿತ್ತು. ಸಂತೆ ದಿನವೇ ಈ ರೀತಿ ವ್ಯತ್ಯಯ ಉಂಟಾಗಿರುವುದು ಜನರಿಗೆ ದೊಡ್ಡ ಸಮಸ್ಯೆಯಾಗಿದೆ. ಮುಂಚಿತ ಮಾಹಿತಿ ನೀಡಿದ್ದರೆ ನಾವು ಯೋಜನೆ ಮಾಡಿಕೊಂಡಿರುತ್ತಿದ್ದೆವು. ವಿದ್ಯಾರ್ಥಿಗಳು ಹಾಗು ದಿನನಿತ್ಯ ಪ್ರಯಾಣಿಕರಿಗೆ ಇದು ಬಹಳ ತೊಂದರೆ ಉಂಟುಮಾಡಿದೆ ಎಂದು ಪ್ರಯಾಣಿಕರು ಅಸಮಾಧಾನ ವ್ಯಕ್ತಪಡಿಸಿದರು.

# ಬಕ್ರೀದ್ : ಬೇಲೂರಿನಲ್ಲಿ ಶಾಂತಿ ಸಭೆ

» ಮೊದಲನೇ ಪುಟದಿಂದ

ಬಗ್ಗೆ ಮಾಹಿತಿ ಬರುತ್ತಿದ್ದು, ಈ ಕುರಿತು ಪೊಲೀಸ್ ಇಲಾಖೆ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದೆ. ಇಂತಹ ಅಕ್ರಮ ಚಟುವಟಿಕೆಗಳ ಬಗ್ಗೆ ಸಾರ್ವಜನಿಕರು ಮಾಹಿತಿ ನೀಡಬೇಕು. ಬಕ್ರೀದ್ ಹಬ್ಬವನ್ನು ಶಾಂತಿಯುತವಾಗಿ ಆಚರಿಸಬೇಕು. ಅಪ್ರಾಪ್ತರಿಗೆ ವಾಹನ ನೀಡಬಾರದು ಹಾಗೂ ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲಿಸಬೇಕು ಎಂದು ಸಲಹೆ ನೀಡಿದರು.

ಹಿಂದೂ ಪರ ಸಂಘಟನೆ ಮುಖಂಡರಾದ ಮೋಹನ್ ಕುಮಾರ್ ಹಾಗು ಸಂತೋಷ ಮಾತನಾಡಿ, ಕೆಲವರು ಗೊಂದಲ ಸೃಷ್ಟಿಸಲು ಯತ್ನಿಸಿದರೆ ಸಾರ್ವಜನಿಕರು ಜಾಗೃತರಾಗಿರಬೇಕೆಂದರು. ಕರವೇ ತಾಲೂಕು ಅಧ್ಯಕ್ಷ ಚಂದ್ರಶೇಖರ, ಹಿಂದೂ ಸಂಘಟನೆ ಮುಖಂಡರಾದ ಭರತ್, ನಾಗೇಶ್, ಮುಸ್ಲಿಂ ಮುಖಂಡರಾದ ನವೀದ್, ಅಬ್ದುಲ್ ಖಾದರ್ ಸೇರಿ ಹಿಂದೂ ಹಾಗು ಮುಸ್ಲಿಂ ಸಮುದಾಯದ ಮುಖಂಡರು ಭಾಗವಹಿಸಿದ್ದರು. ಪೊಲೀಸ್ ದೇವರಾಜ್ ಉಪಸ್ಥಿತರಿದ್ದರು.

# ಪಟ್ಟಣ ಪಂಚಾಯಿತಿ ಆಸ್ತಿ ರಕ್ಷಿಸಲು ಕರವೇ ಮನವಿ



• ಪ್ರಜೋದಯ ವರದಿ

**ಬಾಣಾವರ:** ಪಟ್ಟಣ ಪಂಚಾಯಿತಿಯ ನಿವೇಶನಗಳನ್ನು ಖಾಸಗಿ ವ್ಯಕ್ತಿಗಳು ಮನಬಂದಂತೆ ಬಳಸಿಕೊಳ್ಳುತ್ತಿರುವುದರಿಂದ ಕೋಟ್ಯಾಂತರ ರೂ. ನಷ್ಟವಾಗುತ್ತಿದೆ. ಪಟ್ಟಣ ಪಂಚಾಯಿತಿ ಆಸ್ತಿಯನ್ನು ರಕ್ಷಿಸುವಂತೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆಯಿಂದ ಮನವಿ ಸಲ್ಲಿಸಲಾಯಿತು.

ಮುಖ್ಯಾಧಿಕಾರಿ ನೀಲಕಂಠ ಅವರಿಗೆ ಮನವಿ ಪತ್ರ ಸಲ್ಲಿಸಿದ ಬಳಿಕ ಮಾತನಾಡಿದ ಕರವೇ ತಾಲ್ಲೂಕು ಗೌರವಾಧ್ಯಕ್ಷ ಬಿ.ಆರ್.ಲಕ್ಷ್ಮೀಶ್ ಅವರು, ಬಾಣಾವರ ದಿನೇ ದಿನೇ ವೇಗವಾಗಿ ಬೆಳೆಯುತ್ತಿದ್ದು, ನಿವೇಶನಗಳ ಬೆಲೆ ಗಗನಕ್ಕೇರಿದೆ. ಆದರೆ, ಪಟ್ಟಣದ ಮಧ್ಯಭಾಗದಲ್ಲಿರುವ ಸರ್ಕಾರಿ ಬಸ್ ನಿಲ್ದಾಣದ ಪಕ್ಕದ ಪಟ್ಟಣ ಪಂಚಾಯಿತಿ ನಿವೇಶನದಲ್ಲಿ ಖಾಸಗಿ ವ್ಯಕ್ತಿಯೊಬ್ಬರು ಅಧಿಕಾರಿಗಳ ಆದೇಶವನ್ನು ಉಲ್ಲಂಘಿಸಿ ಕಟ್ಟಡ ನಿರ್ಮಾಣ ಮಾಡುತ್ತಿದ್ದಾರೆಂದರು.

ತಕ್ಷಣವೇ ಅನಧಿಕೃತ ಕಟ್ಟಡ ಕಾಮಗಾರಿ ತಡೆದು, ಈ ಸ್ವತ್ತನ್ನು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲೇ ಉಳಿಸಿಕೊಳ್ಳುವಂತೆ ಅಧಿಕಾರಿಗಳಿಗೆ ಮನವಿ ಮಾಡಲಾಗಿದೆ. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಹಿರಿಯ ನಾಗರಿಕ ವೇದಿಕೆ ಅಧ್ಯಕ್ಷ ಪರಮೇಶ್ವರ, ಕಾಂಗ್ರೆಸ್ ಮುಖಂಡರಾದ ಟಿ.ಎಲ್. ಪ್ರಕಾಶ್, ಮೊಹಮ್ಮದ್ ಇಲಿಯಾಜ್, ರೈತ ಮುಖಂಡರಾದ ದಾದಾಪೀರ್ ಮತ್ತು ಮಲ್ಲಿಕಾರ್ಜುನ್ ಇದ್ದರು.

# ಪ್ರತಿಭಾ ಪುರಸ್ಕಾರ, ಸನ್ಮಾನಕ್ಕೆ ಅರ್ಜಿ

• ಪ್ರಜೋದಯ ವರದಿ

**ಹಾಸನ:** ಎಸ್‌ಎಸ್‌ಎಲ್‌ಸಿ ಹಾಗು ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗು ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಜೂ.6 ರಂದು ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ಅರ್ಹರು ಅರ್ಜಿ ಸಲ್ಲಿಸುವಂತೆ ಮೈತ್ರಿ ಎಜುಕೇಷನ್ ಸೊಸೈಟಿ ಅಧ್ಯಕ್ಷ ವೆಂಕಟೇಶ್ ಮೈತ್ರಿ ಅವರು ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿಭಾವಂತ ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿ ಸಮೇತ ಅರ್ಜಿ ಸಲ್ಲಿಸಬಹುದು. ಅರ್ಹ ವಿದ್ಯಾರ್ಥಿಗಳು ಹಾಗು ಸಾಧಕರು ಮೇ 29 ರೊಳಗೆ 87621-15463 ಮತ್ತು 63614-79093 ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ ಎಂದರು.

ಶಿಕ್ಷಣ ಕ್ಷೇತ್ರದಲ್ಲಿ ಮೇಲುಗೈ ಸಾಧಿಸಿದ ವಿದ್ಯಾರ್ಥಿಗಳಿಗೆ ಗೌರವ ಸಲ್ಲಿಸುವ ಮೂಲಕ ಇತರೆ ವಿದ್ಯಾರ್ಥಿಗಳಲ್ಲೂ ಸ್ಪರ್ಧಾತ್ಮಕ ಮನೋಭಾವ ಬೆಳೆಸುವ ಪ್ರಯತ್ನ ಇದಾಗಿದೆ. ಇದೇ ಸಂದರ್ಭದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಸಾಧಕರನ್ನು ಗುರುತಿಸಿ ಜಿಲ್ಲಾ ಮಟ್ಟದ ಪ್ರಶಸ್ತಿ ನೀಡಿ ಸನ್ಮಾನಿಸಲಾಗುತ್ತದೆ. ಸಮಾಜಸೇವೆ,



ಆರೋಗ್ಯ, ಶಿಕ್ಷಣ, ಕೃಷಿ, ಕಲೆ, ಸಾಹಿತ್ಯ, ಪತ್ರಿಕೋದ್ಯಮ, ರಂಗಭೂಮಿ, ಸಾಂಸ್ಕೃತಿಕ ಕ್ಷೇತ್ರ ಸೇರಿ ಹಲವಾರು ವಿಭಾಗಗಳಲ್ಲಿ ಸೇವೆ ಸಲ್ಲಿಸಿದ ಗಣ್ಯರನ್ನು ಗೌರವಿಸಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ನಗರದ ಜವೇನಹಳ್ಳಿ ಮಠದ ಶ್ರೀ ಸಂಗಮೇಶ್ವರ ಸ್ವಾಮೀಜಿ, ಬಸವಾಪಟ್ಟಣ ತೋಂಟದಾರ್ಯ ಮಠದ ಶ್ರೀ ಬಸವಲಿಂಗ ಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸುವರು. ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಉದ್ಘಾಟನೆ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್, ಸಕಲೇಶಪುರ ಶಾಸಕ ಸಿಮೆಂಟ್ ಮಂಜು, ಹಿರಿಯ ಪತ್ರಕರ್ತೆ ವಿಜಯಲಕ್ಷ್ಮಿ ಶಿಬರೂರು ಭಾಗವಹಿಸಲಿದ್ದಾರೆ ಎಂದರು.

ಸಂಸ್ಥೆಯ ರಾಜಯ್ಯ, ಪರಿವರ್ತನಾ ಕಲಾ ತಂಡದ ಉಪಾಧ್ಯಕ್ಷ ಅಣ್ಣಪ್ಪ ಹ್ಯಾರಿಗಳಲೆ, ಅಕ್ಷರಶ್ರೀ ಫೌಂಡೇಷನ್ ನಿರ್ದೇಶಕ ಮಂಜು, ಕಾರ್ಯದರ್ಶಿ ಶಿವಣ್ಣ ಇದ್ದರು.

# ಲೋ ನವೀನ ಸಿನಿಮಾಗೆ ಉತ್ತಮ ಪ್ರತಿಕ್ರಿಯೆ



• ಪ್ರಜೋದಯ ವರದಿ

**ಹಾಸನ:** ರಾಜ್ಯಾದ್ಯಂತ ಬಿಡುಗಡೆಯಾಗಿರುವ ಲೋ ನವೀನ ಸಿನಿಮಾಗೆ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಮಕ್ಕಳು, ಮಹಿಳೆಯರು, ಹಿರಿಯರು ಕುಟುಂಬ ಸಮೇತರಾಗಿ ಚಿತ್ರ ವೀಕ್ಷಣೆ ಮಾಡುತ್ತಿರುವುದು ಸಂತಸ ತಂದಿದೆ ಎಂದು ನಟ, ಗಾಯಕ ನವೀನ್ ಸಜ್ಜು ಅವರು ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮೀಣ ಸೊಗಡಿನ ಕಥೆ, ಹಾಡುಗಳುಳ್ಳ ಈ ಚಿತ್ರವನ್ನು ಹಳೇ ಮೈಸೂರು ಭಾಗದ ಜನರಿಗೆ ತುಂಬ ಹತ್ತಿರವಾಗುತ್ತದೆ. ರಾಜ್ಯಾದ್ಯಂತ 130 ಕಡೆ ಸಿನಿಮಾ ಬಿಡುಗಡೆ ಆಗಿ 350 ಶೋ ಪ್ರದರ್ಶನ ಕಂಡಿದೆ. ಬುಧವಾರ ಸಂಜೆ 4 ಗಂಟೆಗೆ ತಾವು ನಗರದ ಶ್ರೀಗುರು ಚಿತ್ರ ಮಂದಿರದಲ್ಲಿ ಸಿನಿಮಾ ವೀಕ್ಷಣೆ ಮಾಡಲಿದ್ದು, ಜಿಲ್ಲೆಯ ಜನರು ಕುಟುಂಬ ಸಮೇತರಾಗಿ ಬಂದು ಸಿನಿಮಾ ನೋಡಿ ಎಂದು ಕೋರಿದರು.

ನಟನಾಗಿ ಇದು ನನಗೆ ಮೊದಲ ಸಿನಿಮಾ. ಈಗಾಗಲೇ 8 ಹಾಡುಗಳು ಸೂಪರ್ ಹಿಟ್ ಆಗಿವೆ. ಚಿತ್ರ ಎಲ್ಲಾ ಘಟನೆ, ಸನ್ನಿವೇಶಗಳು ನಮ್ಮ ಕಣ್ಣ ಮುಂದೆಯೇ ನಡೆಯುತ್ತಿವೆಯೋ ಎಂದು ಭಾಸವಾಗುತ್ತದೆ. ಆ ರೀತಿ ಚಿತ್ರೀಕರಣ ಮಾಡಲಾಗಿದೆ, ಒಳ್ಳೇ ಸಂದೇಶದ ಜೊತೆಗೆ ಸುಮಾರು 2 ಗಂಟೆ ಕಾಲ ನೋಡುಗರಿಗೆ ಒಳ್ಳೆಯ ಮನರಂಜನೆ ಸಿಗಲಿದೆ. ಸಿನಿಮಾವನ್ನು ಮೊಬೈಲ್ ರೆಕಾರ್ಡ್ ಮಾಡಿ ಫೇಸ್ ಬುಕ್ ಇತ್ಯಾದಿ ಸೋಷಿಯಲ್ ಮೀಡಿಯಾಗಳಲ್ಲಿ ಅಪ್‌ಲೋಡ್ ಮಾಡಬೇಡಿ ಎಂದು ಮನವಿ ಮಾಡಿದ ಅವರು, ನಾವು ನಮ್ಮದೇ ಕನಸು ಹೊತ್ತು ಕಷ್ಟಪಟ್ಟು ಸಿನಿಮಾ ಮಾಡಿರುತ್ತೇವೆ. ಅದಕ್ಕಾಗಿ ಹಲವು ವರ್ಷ ಹಗಲಿರುಳು ಶ್ರಮ ಹಾಕಿರುತ್ತೇವೆ. ಅದನ್ನು ಕೆಲವೇ ಕ್ಷಣಗಳಲ್ಲಿ ಹಾಳು ಮಾಡಬೇಡಿ ಎಂದು ಮನವಿ ಮಾಡಿದರು.

# ಶಾಲಾ ಕೊಠಡಿ ನಿರ್ಮಾಣಕ್ಕೆ ಭೂಮಿಪೂಜೆ

• ಪ್ರಜೋದಯ ವರದಿ

**ಜಾವಗಲ್:** ಬೆಂಗಳೂರಿನ ಓ ಸ್ಯಾಟ್ ಎಜುಕೇಷನಲ್ ಚಾರಿಟಬಲ್ ಟ್ರಸ್ಟ್ ವತಿಯಿಂದ 81 ಲಕ್ಷ ರೂ. ವೆಚ್ಚದಲ್ಲಿ ಜಾವಗಲ್ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಿರ್ಮಿಸಲಾಗುತ್ತಿರುವ 4 ಸುಸಜ್ಜಿತ ಬೋಧನಾ ಕೊಠಡಿಗಳಿಗೆ ಶಾಸಕ ಹೆಚ್.ಕೆ. ಸುರೇಶ್ ಅವರು ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಹೆಚ್.ಕೆ.ಸುರೇಶ್ ಅವರು, ಜಾವಗಲ್ ಹೋಬಳಿಯ ಶೈಕ್ಷಣಿಕ ಅಭಿವೃದ್ಧಿಗೆ ಟ್ರಸ್ಟ್ ಕೈಗೊಂಡಿರುವ ಈ ಮಹತ್ವದ ಕಾರ್ಯ ಶ್ಲಾಘನೀಯ. ಕ್ಷೇತ್ರದ ಇತರೆ ಶಾಲೆಗಳಿಗೂ ಇದೇ ರೀತಿಯ ಸೌಲಭ್ಯಗಳು ದೊರಕಿಸಲು ಎಲ್ಲರೂ ಶ್ರಮಿಸಬೇಕು. ಪಿಡಿಒ ರವಿ ಹಾಗು ಚೇತನ ರವಿ ಅವರ ಪ್ರಯತ್ನದಿಂದ ಈ ಯೋಜನೆ ಸಾಧ್ಯವಾಯಿತು ಎಂದು ತಿಳಿಸಿದರು.

ಟ್ರಸ್ಟ್‌ನ ಎಂಡಿ ವೀರಣ್ಣಗೌಡ ಅವರು ಮಾತನಾಡಿ, 2003ರಲ್ಲಿ ಅಮೇರಿಕಾದಲ್ಲಿ ಆರಂಭಗೊಂಡ ಸಂಸ್ಥೆಯು 2011ರಿಂದ ಬೆಂಗಳೂರಿನಲ್ಲಿ ಶೈಕ್ಷಣಿಕ ಧರ್ಮದತ್ತಿ ಟ್ರಸ್ಟ್ ಮೂಲಕ ಗ್ರಾಮೀಣ ಶಾಲೆಗಳ ಅಭಿವೃದ್ಧಿಗೆ ಮುಂದಾಗಿದೆ. ಜಾವಗಲ್‌ನಲ್ಲಿ 145ನೇ ಶಾಲಾ ಯೋಜನೆ ಆರಂಭವಾಗಿದೆ. 10 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ. ಸಂಸ್ಥೆಯು ಈಗಾಗಲೇ ದೇಶದ 11 ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, 1.6 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ನೆರವಾಗಿದೆ. ಕೊಠಡಿಗಳ ಜೊತೆಗೆ ಸ್ಮಾರ್ಟ್ ಕ್ಲಾಸ್, ಟ್ಯಾಬ್, ಲ್ಯಾಪ್‌ಟಾಪ್ ಸೇರಿ ಆಧುನಿಕ ಕಲಿಕಾ ಸೌಲಭ್ಯಗಳನ್ನೂ ಒದಗಿಸಲಾಗುತ್ತಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ವಿವಿಧ ಗಣ್ಯರು, ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು ಹಾಗು ಸಾರ್ವಜನಿಕರು ಭಾಗವಹಿಸಿದ್ದರು.



ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK